ಜನಮನದ ದನಿ

ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಮಹಿಳಾ ತಂಡದ ವಿರುದ್ಧ ನಡೆಯುತ್ತಿರುವ ಮೊದಲ ಟೆಸ್ಟ್ ಪಂದ್ಯದಲ್ಲಿ ಅರ್ಧ ಶತಕ (83 ರನ್) ಗಳಿಸಿದ ಭಾರತ ತಂಡದ ಸ್ಮೃತಿ ಮಂದಾನ...

11 ಜುಲೈ, 2026 ಶನಿವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 122 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಭಾರತ : ಇದು ಪ್ರಾಚೀನ ಸನಾತನದ ಅಖಂಡ ಸತ್ಯ » 2

ಒಂದು ರಾಷ್ಟ್ರ, ಒಂದು ಚುನಾವಣೆ ಜಾರಿಗೆ » 3

ಶೇ.97.16 ರಷ್ಟು ಎನ್ಯುಮರೇಷನ್ ನಮೂನೆ ವಿತರಣೆ » 4

ಸಿಎಂಗೆ ನೀರಾವರಿ ಸಂಕಷ್ಟಗಳ ಪರಿಜ್ಞಾನವಿಲ್ಲ

ನದಿ ಜೋಡಣೆಗೆ ರಾಜ್ಯದ ಸಮ್ಮತಿ ಎಂದ ಮುಖ್ಯಮಂತ್ರಿಗೆ ಹೆಚ್.ಡಿ.ಕುಮಾರಸ್ವಾಮಿ ತರಾಟೆ

• ಪ್ರಜೋದಯ ವರದಿ

ಬೆಂಗಳೂರು: ಕಾವೇರಿ, ಕೃಷ್ಣಾ, ಗೋದಾವರಿ ಜೋಡಣೆಗೆ ರಾಜ್ಯದ ಸಮ್ಮತಿ ಇದೆ ಎಂದು ಹೇಳಿರುವ ಮುಖ್ಯಮಂತ್ರಿ ವರ್ತನೆ ಅತ್ಯಂತ ಹೊಣೆಗೇಡಿತನದಿಂದ ಕೂಡಿದೆ. ರಾಜ್ಯದ ನೀರಾವರಿ ಸಂಕಷ್ಟಗಳ ಬಗ್ಗೆ ಅವರಿಗೆ ಕನಿಷ್ಠ ಪರಿಜ್ಞಾನವೂ ಇಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಟೀಕಾ ಪ್ರಹಾರ ನಡೆಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ನೀರಾವರಿ ಹಿತಾಸಕ್ತಿಯ ಬಗ್ಗೆ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ನದಿ ಜೋಡಣೆ ಬಗ್ಗೆ ನನ್ನ ವಿರೋಧ ಇಲ್ಲ, ಯೋಜನೆ ಜಾರಿಗೆ ಬರಲೇಬೇಕು. ಆದರೆ, ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆಯಿಂದ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಎಷ್ಟು ಎಂಬುದನ್ನು ತಿಳಿದುಕೊಂಡು ಚರ್ಚಿಸಬೇಕು. ದೇವೇಗೌಡರು ಹೋರಾಟ ಮಾಡಿದ ನಂತರ ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು ಎಂಬುದರ ಬಗ್ಗೆ ಮುಖ್ಯಮಂತ್ರಿಗೆ ಕನಿಷ್ಠ ಮಾಹಿತಿ ಇಲ್ಲವೆಂದು ಆರೋಪಿಸಿದರು.

ನದಿ ಜೋಡಣೆ ಬಗ್ಗೆ ಮಾಹಿತಿ ಇಲ್ಲದಿದ್ದರೆ ನೀರಾವರಿ ತಜ್ಞರು ಅಥವಾ ಇಲಾಖೆಯ ಇಂಜಿನೀಯರ್‌ಗಳಿಂದ ಅಥವಾ ರಾಜ್ಯದ ಪರ ವಕಾಲತ್ತು ವಹಿಸುವ ವಕೀಲರ ಬಳಿ ಮಾಹಿತಿ ಪಡೆಯಬೇಕಿತ್ತು. ಅದನ್ನು ಬಿಟ್ಟು ಇಲ್ಲದೆ ಮಾಧ್ಯಮಗಳಿಗೆ ಹೇಳಿಕೆ ನೀಡಿ ನಗೆಪಾಟಲಿಗೆ ತುತ್ತಾಗಿದ್ದೀರಿ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ವಾರದ ಹಿಂದೆ ಮೂವರು ಮುಖ್ಯಮಂತ್ರಿ ಸೇರಿ ಕ್ರೆಸ್ಟ್ ಗೇಟ್‌ಗಳ ಬಟನ್ ಒತ್ತಿದರು. ಹಣ ನಮ್ಮ ರಾಜ್ಯದ್ದು, ನೀರು ಬೇರೆಯವರಿಗೆ, ತುಂಗಭದ್ರಾ ಜಲಾಶಯದಲ್ಲಿ ಹೂಳು ತೆಗೆಸಲು ನೆರೆ ರಾಜ್ಯಗಳ ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇನೆಂದು ನಮ್ಮ ಮುಖ್ಯಮಂತ್ರಿ ಹೇಳಿಕೆ ನೀಡಿದ್ದಾರೆ. ಅದಕ್ಕೂ ಸಮ್ಮತಿ ಇದೆ ಎನ್ನುತ್ತಾರೆ. ಇದರ ಬಗ್ಗೆ ವಿರೋಧ ಪಕ್ಷಗಳ ಜೊತೆ ಚರ್ಚೆ ಮಾಡಬೇಕಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.

ಮಾಜಿ ಪ್ರಧಾನಿ ದೇವೇಗೌಡ ಅವರು ಹೋರಾಟ ಮಾಡಿದ ಫಲವಾಗಿ 15 ಟಿಎಂಸಿ ನೀರು ಹಂಚಿಕೆ ಆಗಿತ್ತು. ಆ ನೀರನ್ನು ಮಲಪ್ರಭ ಮೂಲಕ ನೀಡಿ ಅದನ್ನು ಕೇವಲ ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರ ಬಳಕೆ ಮಾಡಬೇಕೆಂದು ಷರತ್ತು ವಿಧಿಸಿದ್ದರು. ಕರ್ನಾಟಕ ಮೂರು ನದಿಗಳ ಜೋಡಣೆಗೆ ಸಮ್ಮತಿಸುತ್ತದೆ ಒಂದು ಲಕ್ಷ ಕೋಟಿ ವಿನಿಯೋಗ ಮಾಡಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಯಾವ ಆಧಾರದಲ್ಲಿ ಈ ಹೇಳಿಕೆ ನೀಡಿದ್ದಾರೆಂಬುದನ್ನು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿದರು.

ನದಿ ಜೋಡಣೆ ರಿಯಲ್ ಎಸ್ಟೇಟ್‌ನಂತಲ್ಲ

ಮುಖ್ಯಮಂತ್ರಿಗೆ ಗೊತ್ತಿರಲಿ ನದಿ ಜೋಡಣೆ ಮಾಡುವುದು, ನೀರು ಹಂಚಿಕೆ ಮಾಡುವುದು ಬೆಂಗಳೂರಿನಲ್ಲಿ ಕೂತು ರಿಯಲ್ ಎಸ್ಟೇಟ್ ಮಾಡಿದ ಹಾಗಲ್ಲ. ಇದು ಅತ್ಯಂತ ಸೂಕ್ಷ್ಮ ವಿಚಾರ, ಅತ್ಯಂತ ಜವಾಬ್ದಾರಿತವಾಗಿ ಹೇಳಿಕೆ ನೀಡಬೇಕು. ಈ ಮುಖ್ಯಮಂತ್ರಿಗೆ ಆ ರೀತಿಯ ಯಾವುದೇ ಜವಾಬ್ದಾರಿ, ಹೊಣೆಗಾರಿಕೆ ಗೊತ್ತಿದ್ದಂತೆ ಇಲ್ಲವೆಂದು ಹೆಚ್.ಡಿ.ಕುಮಾರಸ್ವಾಮಿ ಅವರು ಹರಿಹಾಯ್ದರು.

ಪ್ರಗತಿ ಪರಿಶೀಲನೆ ನೆಪದಲ್ಲಿ ಜಾಲಿ ಟ್ರಿಪ್

ಮುಖ್ಯಮಂತ್ರಿ ಪ್ರಗತಿ ಪರಿಶೀಲನೆ ಮತ್ತು ಎಸ್‌ಐಆರ್ ನೆಪದಲ್ಲಿ ಎರಡು ದಿನ ಜಾಲಿ ಟ್ರಿಪ್ ಮಾಡುತ್ತಿದ್ದಾರೆ. ಕೇವಲ ಡಿನ್ನರ್ ಮೀಟಿಂಗ್‌ಗಳನ್ನು ಮಾಡುವುದಕ್ಕೆ ಮುಖ್ಯಮಂತ್ರಿ ಟೂರ್ ಹೊಡೆಯುತ್ತಿದ್ದಾರೆ. ಜನರ ಸಮಸ್ಯೆಗಳ ಬಗ್ಗೆ ಪ್ರವಾಸ ಮಾಡುತ್ತಿದ್ದಾರೆಂದು ಭಾವಿಸಿದ್ದೆ. ರಾಜ್ಯ ಒಂದು ಕಡೆ ಬರ, ಮತ್ತೊಂದು ಕಡೆ ಪ್ರವಾಹ ಪರಿಸ್ಥಿತಿ ಎದುರಿಸುತ್ತಿದೆ. ಇಂತಹ ಘಟನೆ ಸಂದರ್ಭದಲ್ಲಿ ಮುಖ್ಯಮಂತ್ರಿ ಜಾಲಿ ಟ್ರಿಪ್ ಮಾಡಿಕೊಂಡು ಕಾಲಹರಣ ಮಾಡುತ್ತಿದ್ದಾರೆಂದು ಕುಮಾರಸ್ವಾಮಿ ಟೀಕಿಸಿದರು.

ಎತ್ತಿನಹೊಳೆ ವರ : ದ್ವಾರಸಮುದ್ರ ಕೆರೆ ಭರ್ತಿ

• ಪ್ರಜೋದಯ ವರದಿ

ಹಾಸನ: ಬಯಲು ಸೀಮೆ ಜಿಲ್ಲೆಗಳಿಗೆ ಕುಡಿಯುವ ನೀರು ಒದಗಿಸುವ ಉದ್ದೇಶದಿಂದ ಕೈಗೊಂಡಿರುವ ಮಹತ್ವಾಕಾಂಕ್ಷಿ ಎತ್ತಿನಹೊಳೆ ಯೋಜನೆಯಡಿ ನಾಲೆಗಳಿಗೆ ನೀರು ಹರಿಸುತ್ತಿರುವ ಪರಿಣಾಮ ಒಂದೇ ವಾರಕ್ಕೆ ಹಳೇಬೀಡಿನ ಐತಿಹಾಸಿಕ ದ್ವಾರಸಮುದ್ರ ಕೆರೆ ಭರ್ತಿಯಾಗಿದೆ.

ಈ ಬಾರಿ ಸಾಮಾನ್ಯ ಅವಧಿಗೂ ಮೊದಲು ಒಂದೇ ವಾರಕ್ಕೆ ಭರ್ತಿಯಾಗಿರುವುದು ಭಾಗದ ರೈತರಲ್ಲಿ ಸಂತಸ ಮೂಡಿಸಿದೆ. ಸಾಮಾನ್ಯವಾಗಿ ಮಳೆಗಾಲ ಮುಗಿಯುವ ಸೆಪ್ಟೆಂಬರ್ ಅಂತ್ಯಕ್ಕೆ ತುಂಬುತ್ತಿದ್ದ ಕೆರೆಯು ಈ ಬಾರಿ ಮಳೆಯ ಕೊರತೆಯ ನಡುವೆಯೂ ಜುಲೈ ಆರಂಭದಲ್ಲೇ ಕೋಡಿ ಬಿದ್ದಿದ್ದು ಮುಂಬರುವ ದಿನಗಳಲ್ಲಿ ಕೆರೆಗೆ ಹೆಚ್ಚಿನ ನೀರು ಹರಿದುಬರುವ ಸಾಧ್ಯತೆ ಇದೆ.

ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಅವರು ಕಳೆದ ವಾರ ಜಿಲ್ಲೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಸಕಲೇಶಪುರ ಸಮೀಪದ ಎತ್ತಿನಹೊಳೆ ಜಾಕ್‌ವೆಲ್‌ನಿಂದ ನೀರೆತ್ತುವ ಪ್ರಕ್ರಿಯೆ

ಗೆ ಚಾಲನೆ ನೀಡಿದ್ದರು. ಅರಣ್ಯ ಪ್ರದೇಶದ ಸಮಸ್ಯೆಯ ಕಾರಣದಿಂದ ನಾಲೆಯ ಕಾಮಗಾರಿ ಪೂರ್ಣಗೊಂಡಿಲ್ಲ. ಹಾಗಾಗಿ ಎತ್ತಿನಹೊಳೆ ಚೆಕ್ ಡ್ಯಾಂನಲ್ಲಿ ಸಂಗ್ರಹವಾಗುತ್ತಿರುವ ನೀರನ್ನು ಹಳೇಬೀಡು ಕೆರೆಗೆ ಹರಿದು ಬರುವ ಹಳ್ಳಕ್ಕೆ ಸೇರಿಸಲಾಗುತ್ತಿದೆ. ಈ ಪರಿಣಾಮ ದ್ವಾರಸಮುದ್ರ ಕೆರೆಯ ಜೊತೆಗೆ ಚಿತ್ರದುರ್ಗ ಜಿಲ್ಲೆಯ ವಾಣಿವಿಲಾಸ ಸಾಗರ ಜಲಾಶಯದ ವರೆಗೂ ನೀರು ತಲುಪುತ್ತಿದೆ.

ಎತ್ತಿನಹೊಳೆ ಯೋಜನೆಯಡಿಯಲ್ಲಿ ಸಕಲೇಶಪುರ ತಾಲ್ಲೂಕಿನಿಂದ ನಿರ್ಮಿಸಲಾಗಿರುವ ನಾಲೆಯು ಹಳೇಬೀಡು ಸಮೀಪದ ಅಡಗೂರು ಐದಳ್ಳದ ಬಳಿ ಹಾದು ಹೋಗುತ್ತದೆ. ಅದಕ್ಕೆ ಸಮೀಪದಲ್ಲೇ ದ್ವಾರಸಮುದ್ರ ಕೆರೆಗೆ ನೀರು ಹರಿದು ಬರುವ ಕಾಗೆದಳ್ಳವೂ ಇದೆ. ಐದಳ್ಳದ ಬಳಿ ನಾಲೆ ಕಾಮಗಾರಿಯು ಅರಣ್ಯ ಪ್ರದೇಶದ ಸಮಸ್ಯೆಯ ಕಾರಣಗಳಿಂದ ಸ್ಥಗಿತಗೊಂಡಿರುವುದರಿಂದ ಎತ್ತಿನಹೊಳೆ ನಾಲೆಯಲ್ಲಿ ಗುಡ್ಡಗಳಿಂದ ಹರಿದು ಬರುವ ನೀರು ಶೇಖರಣೆಯಾಗುತ್ತಿದೆ. ಒರತೆ ಹಿಮ್ಮುಖವಾಗಿ ಒತ್ತುವ ಕಾರಣ ನೀರನ್ನು ಕಾಗೆದಳ್ಳಕ್ಕೆ ಬಿಡಲಾಗಿದೆ. ಹೀಗಾಗಿ ದ್ವಾರಸಮುದ್ರ ಕೆರೆಗೆ ಯಥೇಚ್ಛ ನೀರು ಹರಿದು ಬರುತ್ತಿದ್ದು, ಇದು ಮುಂದೆ ಚಿಕ್ಕಮಗಳೂರು ಜಿಲ್ಲೆಯ ಬೆಳವಾಡಿ ಗ್ರಾಮದ ಕೆರೆಯನ್ನು ಸೇರುತ್ತದೆ.

ನಾಳೆ ಅರಸೀಕೆರೆಯಲ್ಲಿ ಪತ್ರಿಕಾ ದಿನಾಚರಣೆ

• ಪ್ರಜೋದಯ ವರದಿ

ಹಾಸನ: ಅರಸೀಕೆರೆ ನಗರದ ಕಸ್ತೂರಬಾ ಗಾಂಧಿ ಸ್ಮಾರಕ ಭವನದಲ್ಲಿ ಜು. 12ರ ಭಾನುವಾರ ಪತ್ರಿಕಾ ದಿನಾಚರಣೆ ಏರ್ಪಡಿಸಲಾಗಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಜಿ.ಪ್ರಕಾಶ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಹಾಗು ಅರಸೀಕೆರೆ ತಾಲ್ಲೂಕು ಪತ್ರಕರ್ತರ ಸಂಘದಿಂದ ಸಮಾರಂಭ ನಡೆಯಲಿದ್ದು, ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಕೆ.ಎಂ.ಶಿವಲಿಂಗೇಗೌಡ, ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ನಿಕಟಪೂರ್ವ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಭಾಗಿಯಾಗಲಿದ್ದಾರೆಂದರು.

ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಪತ್ರಕರ್ತರು, ಮಾಧ್ಯಮ ಪ್ರತಿನಿಧಿಗಳು ಭಾಗವಹಿಸಲಿದ್ದು, ಪತ್ರಿಕಾ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಟಿ.ಎ.ನಾರಾಯಣಗೌಡ ದಿಕ್ಕೂಚಿ ಭಾಷಣ ಮಾಡಲಿದ್ದಾರೆ. ಮದನಗೌಡರು ಆಶಯ ನುಡಿಗಳನ್ನಾಡಲಿದ್ದು, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಅಧ್ಯಕ್ಷತೆ ವಹಿಸಲಿದ್ದಾರೆಂದರು.

» ನಾಲ್ಕನೇ ಪುಟದಲ್ಲಿ

ಜಿಲ್ಲೆಯಲ್ಲಿ ಬಿಡುವು ನೀಡಿದ ಮಳೆ

• ಪ್ರಜೋದಯ ವರದಿ

ಹಾಸನ: ಜಿಲ್ಲೆಯಲ್ಲಿ ಮಳೆ ಬಿಡುವು ನೀಡಿದ್ದು, ಶುಕ್ರವಾರ ಬಿಸಿಲಿನ ವಾತಾವರಣ ಕಂಡು ಬಂತು.

ಮಲೆನಾಡು ಭಾಗದಲ್ಲಿ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯಲ್ಲಿ ಎರಡು ಇಂಚಿನಷ್ಟು ಮಳೆಯಾಗಿದೆ. ಹಾಳುಬಾಳು ಮತ್ತು ಯಸಳೂರು ಭಾಗದಲ್ಲಿ ಒಂದು ಇಂಚಿನಷ್ಟು ಮಳೆಯಾಗಿದೆ.

ಹೇಮಾವತಿ ಒಳಹರಿವಿನ ಪ್ರಮಾಣ ಕಡಿಮೆಯಾಗಿದೆ. ಗುರುವಾರ 15,647 ಕ್ಯೂಸೆಕ್ ಇದ್ದ ಒಳ ಹರಿವು, ಶುಕ್ರವಾರ 11,470 ಕ್ಯೂಸೆಕ್‌ಗೆ ಇಳಿದಿದೆ. 2922 ಅಡಿ ಸಾಮರ್ಥ್ಯದ ಜಲಾಶಯದಲ್ಲಿ ಪ್ರಸ್ತುತ 2902 ಅಡಿಯಷ್ಟು ನೀರಿದೆ. ಯಗಚಿ ಜಲಾಶಯಕ್ಕೆ 861 ಕ್ಯೂಸೆಕ್, ವಾಟೆಹೊಳೆ ಜಲಾಶಯಕ್ಕೆ 91 ಕ್ಯೂಸೆಕ್ ಒಳಹರಿವಿದೆ.

ವಾರದ ಬಳಿಕ ಸೂರ್ಯನ ದರ್ಶನವಾಗಿದೆ. ಅರೆಮಲೆನಾಡು, ಬಯಲು ಸೀಮೆಯಲ್ಲಿ ಮಳೆಯ ವಾತಾವರಣ ದೂರವಾಗಿದೆ.

ದೊಡ್ಡಕುಂಚೇವು ಆರೋಗ್ಯ ಕೇಂದ್ರ ಉದ್ಘಾಟನೆ ಜಟಾಪಟಿ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ವಿರುದ್ಧ ಶ್ರೇಯಸ್ ಪಟೇಲ್ ಆಕ್ರೋಶ

• ಪ್ರಜೋದಯ ವರದಿ

ಹೊಳೆನರಸೀಪುರ : ತಾಲ್ಲೂಕಿನ ದೊಡ್ಡ ಕುಂಚೇವು ಗ್ರಾಮದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರ ನೂತನ ಕಟ್ಟಡ ಉದ್ಘಾಟನೆ ಜೆಡಿಎಸ್-ಕಾಂಗ್ರೆಸ್ ಮುಖಂಡರ ನಡುವಿನ ವಾಗ್ಯುದ್ಧಕ್ಕೆ ವೇದಿಕೆಯಾಗಿದೆ. ಸಂಸದ ಶ್ರೇಯಸ್ ಪಟೇಲ್ ಅವರು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಆರೋಗ್ಯ ಕೇಂದ್ರ ಕಟ್ಟಡವನ್ನು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಶಿಷ್ಟಾಚಾರ ಉಲ್ಲಂಘಿಸಿ ಉದ್ಘಾಟನೆ ನೆರವೇರಿಸಿದ್ದಾರೆಂದು ಆರೋಪಿಸಿ ಆರೋಗ್ಯ ಕೇಂದ್ರದ ಮುಂದೆ ಶುಕ್ರವಾರ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿದರು.

9.8 ಕೋ.ರೂ. ವೆಚ್ಚದಲ್ಲಿ ನಿರ್ಮಿಸಿರುವ ಆರೋಗ್ಯ ಕೇಂದ್ರದ ನೂತನ ಕಟ್ಟಡವನ್ನು ಹೆಚ್.ಡಿ.ರೇವಣ್ಣ ಅವರು ಹೋಮ, ಹವನ, ಪೂಜೆ ನೆರವೇರಿಸಿ ಕಟ್ಟಡದ ಉದ್ಘಾಟನೆ ನೆರವೇರಿಸಿ ತೆರಳಿದ್ದರು. ಕಾರ್ಯಕ್ರಮ ಆಯೋಜನೆ ಬಗ್ಗೆ ಗ್ರಾಮಸ್ಥರಿಗೆ ಮಾಹಿತಿ ಇಲ್ಲ. ಸಂಸದ ಶ್ರೇಯಸ್ ಪಟೇಲ್ ಅವರಿಗೆ ಆಹ್ವಾನ ನೀಡಿಲ್ಲವೆಂದು ಆಕ್ರೋಶ ಹೊರ ಹಾಕಿದರು.

> ಪ್ರಜಾಪ್ರಭುತ್ವ ವ್ಯವಸ್ಥೆಯೊಳಗೆ ಶಿಷ್ಟಾಚಾರ ಪಾಲನೆ ನಿಯಮ ಇದೆ. ಅದನ್ನು ಗಾಳಿಗೆ ತೂರಿರುವ ಶಾಸಕ ಹೆಚ್.ಡಿ.

ರೇವಣ್ಣ ಅವರು ಈಗಲಾದರೂ ನಿಯಮಕ್ಕೆ ತಲೆಬಾಗಬೇಕು. ನನಗೂ ಜಿಲ್ಲೆಯ ಜನರು ಮತಹಾಕಿ ಗೆಲ್ಲಿಸಿದ್ದಾರೆ. ಅದನ್ನು ಅರಿಯಬೇಕು. ಅವರ ಹೆಸರನ್ನು ಬಿಟ್ಟಾಗೆಲ್ಲಾ ಶಿಷ್ಟಾಚಾರ ಉಲ್ಲಂಘನೆ ಎಂದು ಕ್ಯಾತೆ ತೆಗೆಯುತ್ತಾರೆ. ಕೇಂದ್ರ ಸರ್ಕಾರದ ಎಬಿಆರ್‌ಕೆ ಅನುದಾನ ಸಹ ರಾಜ್ಯ ಸರ್ಕಾರದ ಅನುದಾನದೊಂದಿಗೆ ಬಳಕೆಯಾಗಿದೆ. ಗ್ರಾಮಸ್ಥರಿಗೂ ವಿಚಾರ ತಿಳಿಸದೆ ಉದ್ಘಾಟಿಸುವ ಅವಶ್ಯಕತೆ ಏನಿತ್ತು.

– ಶ್ರೇಯಸ್ ಪಟೇಲ್, ಸಂಸದ

ಪ್ರತಿಭಟನೆ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಹಾಗು ಆರೋಗ್ಯ ಇಲಾಖೆ ಕಟ್ಟಡ ಅಭಿವೃದ್ಧಿ ವಿಭಾಗದ ಇಂಜಿನೀಯರ್ ಜೀವನ್ ಸ್ಥಳಕ್ಕೆ ಆಗಮಿಸಿ, ನಮಗೂ ಈ ವಿಚಾರ ಗಮನಕ್ಕೆ ಬಂದಿಲ್ಲ. ಕಟ್ಟಡ ನಮ್ಮ ಇಲಾಖೆಗೆ ಇನ್ನೂ ಹಸ್ತಾಂತರವಾಗಿಲ್ಲ. ಪೂಜೆ ಸಲ್ಲಿಸಿರುವುದು ಸೇರಿ ಮತ್ತಾವುದೇ ಕಾರ್ಯ ನಡೆದಿದ್ದರೂ ಗುತ್ತಿಗೆದಾರ ದಯಾನಂದ್ ಮತ್ತು ಶಾಸಕ ಹೆಚ್.ಡಿ.ರೇವಣ್ಣ ಅವರ ವಿಚಾರಕ್ಕೆ ಬಿಟ್ಟಿದ್ದು ಎಂದರು.

ಸ್ಥಳದಲ್ಲೇ ಎರಡೂ ಪಕ್ಷಗಳ ಕಾರ್ಯಕರ್ತರ ನಡುವೆ ಕೆಲ ಕಾಲ ಮಾತಿನ ಚಕಮುಕಿ ನಡೆಯಿತು. ಹೆಚ್.ಡಿ.ರೇವಣ್ಣ ಅವರು ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ನಡೆಸಿದ್ದಾರೆ. ಅವರಿಗೆ ಇದರಿಂದ ಹೆಸರು ಗಳಿಸಬೇಕೆಂದಿಲ್ಲ ಎಂದು ಜೆಡಿಎಸ್ ಮುಖಂಡರು ವಾಗ್ವಾದ ನಡೆಸಿದರು.

ಶಿಷ್ಟಾಚಾರ ಉಲ್ಲಂಘನೆ

ಈ ಕುರಿತು ಪ್ರತಿಕ್ರಿಯಿಸಿದ ಸಂಸದ ಶ್ರೇಯಸ್ ಪಟೇಲ್ ಅವರು, ಕೇಂದ್ರ ಸರ್ಕಾರದ ಅನುದಾನದ ಬಳಕೆಯಿಂದಲೂ ನೂತನ ಕಟ್ಟಡ ಕಾಮಗಾರಿ ನಡೆದಿದೆ. ಆದರೇಗ ಅದರ ಉದ್ಘಾಟನೆಗೆ ಸಂಸದರಾಗಿರುವ

» ನಾಲ್ಕನೇ ಪುಟದಲ್ಲಿ

ಕಾಫಿ ಬೆಳೆಗೆ ಹಾನಿ : ಕೇಂದ್ರದ ನೆರವು ಕೋರಿದ ಹೆಚ್.ಕೆ.ಕೆ.

• ಪ್ರಜೋದಯ ವರದಿ

ಸಕಲೇಶಪುರ: ಅನಾವೃಷ್ಟಿ ಹಾಗು ಅತಿವೃಷ್ಟಿಯಿಂದ ಕಾಫಿ ಬೆಳೆ ತೀವ್ರ ಹಾನಿಗೊಳಗಾಗಿದ್ದು, ಕೇಂದ್ರ ಸರ್ಕಾರ ತಕ್ಷಣ ಸಮೀಕ್ಷೆ ನಡೆಸಿ ಬೆಳೆಗಾರರಿಗೆ ವೈಜ್ಞಾನಿಕ ರೀತಿಯಲ್ಲಿ ಪರಿಹಾರ ನೀಡ ಬೇಕೆಂದು ಮಾಜಿ ಸಚಿವ ಹೆಚ್.ಕೆ.ಕುಮಾರಸ್ವಾಮಿ ಅವರು ಮನವಿ ಮಾಡಿದರು.

ಪಟ್ಟಣದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಮಾರ್ಚ್‌ನಿಂದ ಮುಂಗಾರು ವಿಳಂಬವಾದ ಪರಿ ಣಾಮ ಕಾಫಿ ಹೂ ಬಿಡುವ ಪ್ರಕ್ರಿಯೆ ಹಾನಿಗೊಳಗಾಯಿತು. ಬಳಿಕ ಜುಲೈ ಮೊದಲ ವಾರದಲ್ಲಿ ಸುರಿದ ಅಧಿಕ ಮಳೆಯಿಂದ ಕಾಫಿ ಕಾಯಿ ನೆಲಕ್ಕೆ ಉದುರಿ ಬೆಳೆಗಾರರು ನಷ್ಟಅನುಭವಿಸುವಂತಾಗಿದೆ ಎಂದರು.

ಕೇಂದ್ರ ಸರ್ಕಾರ ಕಾಫಿ ತೋಟಗಳ ಸಮಗ್ರ ಸಮೀಕ್ಷೆ ನಡೆಸಿ, ವೈಜ್ಞಾನಿಕ ಮಾನದಂಡಗಳ ಆಧಾರದ ಮೇಲೆ ಪರಿಹಾರ ನೀಡಬೇಕು. ಈ ವಿಷಯವನ್ನು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಗಮನಕ್ಕೂ ತರಲಾಗುವುದೆಂದು ತಿಳಿಸಿದರು.

ಕುಂಟು ನೆಪ ಹೇಳುವುದು ಸರಿಯಲ್ಲ

ಕಳೆದ ಒಂದು ವ

ತೂಕ ಇಳಿಕೆಗೆ ವಾಕಿಂಗ್, ಜಾಗಿಂಗ್ ಅಥವಾ ರನ್ನಿಂಗ್: ಯಾವುದು ಬೆಸ್ಟ್?

ದೇಹದ ತೂಕವನ್ನು ಕರಗಿಸಲು ಯೋಚಿಸುವ ಬಹುತೇಕರ ಮನಸ್ಸಿನಲ್ಲಿ ಮೂಡುವ ಮೊದಲ ಪ್ರಶ್ನೆನಡೆಯಬೇಕೋ ಅಥವಾ ಓಡಬೇಕೋ? ಎಂಬುದು. ಹೃದಯದ ಆರೋಗ್ಯವನ್ನು ಕಾಪಾಡುವ ಹಾಗೂ ಬೊಜ್ಜು ಕರಗಿಸುವ ವ್ಯಾಯಾಮಗಳಲ್ಲಿ ನಡಿಗೆ ಮತ್ತು ಓಟ ಎರಡೂ ಮುಂಚೂಣಿಯಲ್ಲಿವೆ. ಆದರೆ, ನಿಮ್ಮ ದೇಹಕ್ಕೆ ಇದರಲ್ಲಿ ಯಾವುದು ಹೆಚ್ಚು ಸೂಕ್ತ ಮತ್ತು ಯಾವುದರಿಂದ ತೂಕ ಬೇಗ ಇಳಿಯುತ್ತದೆ ಎಂಬುದನ್ನು ತಿಳಿಯೋಣ.

ಕ್ಯಾಲೊರಿ ಕರಗಿಸುವಲ್ಲಿ ಯಾವುದು ಮುಂದೆ?: ತೂಕ ಇಳಿಸುವ ವಿಚಾರಕ್ಕೆ ಬಂದರೆ ರನ್ನಿಂಗ್ (ಓಟ) ಹೆಚ್ಚು ವೇಗವಾಗಿ ಕೆಲಸ ಮಾಡುತ್ತದೆ. ಇದು ತೀವ್ರವಾದ ವ್ಯಾಯಾಮವಾಗಿರುವುದರಿಂದ ಕಡಿಮೆ ಸಮಯದಲ್ಲಿ ವೇಗವಾಗಿ ಕ್ಯಾಲೊರಿಗಳನ್ನು ಕರಗಿಸುತ್ತದೆ.

ರನ್ನಿಂಗ್ ಮೂಲಕ 30 ನಿಮಿಷಗಳ ಓಟದಿಂದ ಸುಮಾರು 300 ಕ್ಯಾಲೊರಿಗಳು ಕರಗುತ್ತವೆ. ವೇಗದ ವಾಕಿಂಗ್ ಮೂಲಕ ಅದೇ 30 ನಿಮಿಷಗಳಲ್ಲಿ ಕೇವಲ 140 ರಿಂದ 160 ಕ್ಯಾಲೊರಿಗಳು ಮಾತ್ರ ಕರಗಲು ಸಾಧ್ಯ. ಅಂದರೆ, ವಾಕಿಂಗ್‌ಗೆ ಹೋಲಿಸಿದರೆ ರನ್ನಿಂಗ್ ಮಾಡುವುದರಿಂದ ದುಪ್ಪಟ್ಟು ಕ್ಯಾಲೊರಿಗಳನ್ನು ಸುಲಭವಾಗಿ ಕರಗಿಸಬಹುದು.

ಹಾಗಾದರೆ ವಾಕಿಂಗ್ ಪ್ರಯೋಜನಕಾರಿಯಲ್ಲವೇ? ಖಂಡಿತಾ ಉಪಯುಕ್ತ. ರನ್ನಿಂಗ್ ಮಾಡಲು ಸಾಧ್ಯವಾಗದವರಿಗೆ ವಾಕಿಂಗ್ (ನಡಿಗೆ) ಒಂದು ಅತ್ಯುತ್ತಮ ಮತ್ತು ಸುರಕ್ಷಿತವಾದ ಆಯ್ಕೆ. ಪ್ರತಿದಿನ 45 ರಿಂದ 60 ನಿಮಿಷಗಳ ಕಾಲ ವೇಗವಾಗಿ ಹೆಜ್ಜೆ ಹಾಕುವುದು ದೇಹಕ್ಕೆ ಸಾಕಷ್ಟು ಲಾಭಗಳನ್ನು ನೀಡುತ್ತದೆ.

ಇದರಿಂದಾಗಿ ಹೃದಯದ ಸಾಮರ್ಥ್ಯ ಹೆಚ್ಚುತ್ತದೆ, ಸ್ನಾಯುಗಳು ಬಲಗೊಳ್ಳುತ್ತವೆ, ಮಾನಸಿಕ ಒತ್ತಡ ದೂರವಾಗಿ, ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ. ನೀವು ಈಗಷ್ಟೇ ವ್ಯಾಯಾಮ ಮಾಡಲು ಆರಂಭಿಸುತ್ತಿದ್ದರೆ, ಮೊದಲ ದಿನವೇ ಓಡಲು ಹೋಗಬೇಡಿ. ತಜ್ಞರ ಪ್ರಕಾರ ತೂಕ ಇಳಿಸಲು ಈ ಕೆಳಗಿನ ಕ್ರಮವನ್ನು ಅನುಸರಿಸುವುದು ಸೂಕ್ತ.

ಮೊದಲ ಹಂತ: ವಾಕಿಂಗ್‌ನಿಂದ (ನಡಿಗೆ) ಆರಂಭಿಸಿ.

ಎರಡನೇ ಹಂತ: ಕ್ರಮೇಣ ವೇಗವನ್ನು ಹೆಚ್ಚಿಸಿ ಜಾಗಿಂಗ್ (ಅರೆ ನಡಿಗೆ) ರೂಢಿಸಿಕೊಳ್ಳಿ.

ಮೂರನೇ ಹಂತ: ದೇಹ ಸಜ್ಜಾದ ನಂತರ ರನ್ನಿಂಗ್ (ಓಟ) ಮಾಡಲು ಮುಂದಾಗಿ.

ತೂಕವನ್ನು ನಿಯಂತ್ರಣದಲ್ಲಿಡಲು ವಾರಕ್ಕೆ ಕನಿಷ್ಠ 150 ನಿಮಿಷಗಳ ಕಾಲ ಮಧ್ಯಮ ನಡಿಗೆ ಅಥವಾ 75 ನಿಮಿಷಗಳ ಕಾಲ ರನ್ನಿಂಗ್ ಮಾಡಬೇಕು.

ಯಾರು ಯಾವುದನ್ನು ಆರಿಸಿಕೊಳ್ಳಬೇಕು?: ಯುವಕರು ಮತ್ತು ಬೇಗ ತೂಕ ಇಳಿಸಬೇಕಾದವರು: ರನ್ನಿಂಗ್ ಆಯ್ಕೆ ಮಾಡಿಕೊಳ್ಳಬಹುದು.

ಆರಂಭಿಕರು ಮತ್ತು ಕೀಲು ನೋವಿರುವವರು: ವಾಕಿಂಗ್ ಮಾಡುವುದು ಸುರಕ್ಷಿತ.

50 ವರ್ಷ ಮೇಲ್ಪಟ್ಟವರು / ರೋಗಿಗಳಿಗೆ: ವಯಸ್ಸು 50 ದಾಟಿದವರು, ಸಂಧಿವಾತ ಅಥವಾ ಹೃದಯದ ಸಮಸ್ಯೆ ಇರುವವರಿಗೆ ವಾಕಿಂಗ್ ಅತ್ಯಂತ ಸೂಕ್ತ. ಏಕೆಂದರೆ ರನ್ನಿಂಗ್ ಮಾಡುವುದರಿಂದ ಸೊಂಟ ಮತ್ತು ಕೀಲುಗಳ ಮೇಲೆ ಹೆಚ್ಚಿನ ಒತ್ತಡ ಬಿದ್ದು ನೋವು ಹೆಚ್ಚಾಗಬಹುದು.

ಆದರೆ ಒಂದು ನೆನಪಿರಲಿ, ಕೇವಲ ವ್ಯಾಯಾಮದಿಂದ ತೂಕ ಇಳಿಯಲ್ಲ! ದೇಹದ ತೂಕ ಕಡಿಮೆಯಾಗಲು ಕೇವಲ ಓಟ ಅಥವಾ ನಡಿಗೆಯಷ್ಟೇ ಸಾಲದು. ಇದರ ಜೊತೆಗೆ ನಿಮ್ಮ ಜೀವನಶೈಲಿ ಮತ್ತು ಆಹಾರ ಪದ್ಧತಿ ಬದಲಾಗಬೇಕು. ಕಡಿಮೆ ಕ್ಯಾಲೊರಿ ಇರುವ, ಪೌಷ್ಟಿಕಾಂಶ ಹಾಗೂ ನಾರಿನಂಶ ಹೆಚ್ಚಿರುವ ಸಮತೋಲಿತ ಆಹಾರವನ್ನು ಸೇವಿಸಿದಾಗ ಮಾತ್ರ ತೂಕ ಇಳಿಕೆಯ ಗುರಿಯನ್ನು ಯಶಸ್ವಿಯಾಗಿ ತಲುಪಬಹುದು.



ನಿಮಗೆ ವೇಗವಾಗಿ ತೂಕ ಇಳಿಯಬೇಕಿದ್ದರೆ ರನ್ನಿಂಗ್ ಸೂಕ್ತ, ಆದೇ ಯಾವುದೇ ಅಪಾಯವಿಲ್ಲದೆ ನಿಧಾನವಾಗಿ ತೂಕ ಇಳಿಸಿಕೊಳ್ಳಲು ವಾಕಿಂಗ್ ಅತ್ಯುತ್ತಮ. ನಿಮ್ಮ ದೇಹದ ದೈಹಿಕ ಸಾಮರ್ಥ್ಯಕ್ಕೆ ತಕ್ಕಂತೆ ಸರಿಯಾದ ಹಾದಿಯನ್ನು ಆರಿಸಿಕೊಳ್ಳಿ.

– ಕೆ.ಪಿ.ಅಶ್ವಿನ್ ರಾವ್

ಭಾರತ : ಇದು ಪ್ರಾಚೀನ ಸನಾತನದ ಅಖಂಡ ಸತ್ಯ

ಒಕ್ಕೂಟ ವಾದದ ಮೂಲ ಮತ್ತು ಇಂದಿನ ಅಪಪ್ರಚಾರ

ಬ್ರಿಟಿಷರು ಭಾರತದ ಉದ್ದಗಲಕ್ಕೂ ತಂದ ಏಕರೂಪದ ಕಾನೂನುಗಳು ಮತ್ತು ರೈಲುಜಾಲದಿಂದಲೇ 1950ರಲ್ಲಿ ಗಣತಂತ್ರವಾದಾಗ ಭಾರತವೆಂಬ ಬೃಹತ್ ರಾಷ್ಟ್ರ ಉದಯಿಸಿತು ಎಂಬ ವಾದವನ್ನು ಇಂದಿಗೂ ಸಾರ್ವಜನಿಕವಾಗಿ ನಂಬಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿವೆ. ಇದರೊಂದಿಗೆ ಭಾರತವನ್ನು ಉತ್ತರ ಮತ್ತು ದಕ್ಷಿಣವೆಂದು ಭಾವನಾತ್ಮಕವಾಗಿ ವಿಭಜಿಸುವ ಕುತಂತ್ರದ ಆಲೋಚನೆಗಳನ್ನು ಮುಂಚೂಣಿಗೆ ತರಲು ಒಂದು ವ್ಯವಸ್ಥಿತ ಸಾಮಾಜಿಕ ಹಾಗೂ ಬೌದ್ಧಿಕ ಜಾಲ ಸದಾ ಸಕ್ರಿಯವಾಗಿರುತ್ತದೆ. ಇಂದಿನ ಮಾರ್ಕ್ಸ್‌ವಾದಿ ಇತಿಹಾಸಕಾರರು ಮತ್ತು ರಾಹುಲ್ ಗಾಂಧಿಯಂತಹ ರಾಜಕಾರಣಿಗಳು ಶೈಕ್ಷಣಿಕ ವಲಯದಲ್ಲಿ ಇದೇ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ. ಅವರ ಪ್ರಕಾರ, ಭಾರತವು ಇತಿಹಾಸದಲ್ಲಿ ಎಂದಿಗೂ ಒಂದೇ ರಾಷ್ಟ್ರವಾಗಿರಲಿಲ್ಲ, ಬ್ರಿಟಿಷರಿಗಿಂತ ಮೊದಲು ಇದು ಕೇವಲ ನೂರಾರು ಸ್ವತಂತ್ರ ರಾಜರ ಭೌಗೋಳಿಕ ತುಂಡುಗಳ ಪ್ರಾಂತ್ಯವಾಗಿತ್ತೇ ಹೊರತು ಭಾವನಾತ್ಮಕವಾಗಿ ಒಂದಾಗಿರಲಿಲ್ಲ, ಭಾರತವೆಂಬ ಕಲ್ಪನೆ ಹುಟ್ಟಿದ್ದೇ 1950ರ ಸಂವಿಧಾನದ ವಿಧಿ 1ರ ರಾಜ್ಯಗಳ ಒಕ್ಕೂಟ ಎಂಬ ಸಾಲಿನ ಮೂಲಕ; ಇದು ಕೇವಲ ವಿಭಿನ್ನ ಭಾಷೆ-ಸಂಸ್ಕೃತಿಗಳ ರಾಜ್ಯಗಳು ಮಾಡಿಕೊಂಡ ಆಡಳಿತಾತ್ಮಕ ಒಪ್ಪಂದವಾಗಿದ್ದು, ಯುರೋಪಿಯನ್ ಯೂನಿಯನ್ ಮಾದರಿಯ ವ್ಯವಸ್ಥೆಯಾಗಿದೆ ಎಂಬುದು ಇವರ ವಾದದ ಪ್ರಮುಖ ತಿರುಳಾಗಿದೆ.

ಜಾಗತಿಕ ವೇದಿಕೆಗಳಲ್ಲಿ ಸಿದ್ಧಾಂತದ ಪ್ರದರ್ಶನ

ಈ ಒಕ್ಕೂಟ ವಾದವನ್ನು ಜಾಗತಿಕ ಮಟ್ಟದಲ್ಲೂ ತಾರ್ಕಿಕ ರೂಪದಲ್ಲಿ ಪ್ರಚಾರ ಮಾಡಲಾಗುತ್ತಿದೆ. 2022ರ ಫೆಬ್ರವರಿಯಲ್ಲಿ ಭಾರತದ ಲೋಕಸಭೆಯಲ್ಲಿ ಇದು ರಾಜ್ಯಗಳ ಒಕ್ಕೂಟ ಎಂದು ವಾದ ಮಂಡಿಸಿದ ರಾಹುಲ್ ಗಾಂಧಿಯವರು, ಅದೇ ವರ್ಷ ಮೇ ತಿಂಗಳಲ್ಲಿ ಲಂಡನ್‌ನ ಐಡಿಯಾಸ್ ಫಾರ್ ಇಂಡಿಯಾ ಸಮಾವೇಶ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಉಪನ್ಯಾಸಗಳಲ್ಲಿ ಭಾರತವನ್ನು ಯುನೈಟೆಡ್ ಯುರೋಪ್‌ನಂತೆ ಯೋಚಿಸಿ ಎಂದು ನೇರವಾಗಿ ಯುರೋಪ್‌ಗೆ ಹೋಲಿಸಿದ್ದರು. ತದನಂತರ 2023ರ ಮೇ-ಜೂನ್‌ನಲ್ಲಿ ಅಮೆರಿಕದ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯ ಹಾಗೂ ವಾಷಿಂಗ್ಟನ್ ನ್ಯಾಷನಲ್ ಪ್ರೆಸ್ ಕ್ಲಬ್‌ನಲ್ಲೂ ಇದೇ ನಿಲುವನ್ನು ಪುನರುಚ್ಚರಿಸಿ, ಕೇಂದ್ರ ಸರ್ಕಾರವು ರಾಜ್ಯಗಳ ಸ್ವಾಯತ್ತತೆಯನ್ನು ಹತ್ತಿಕ್ಕುತ್ತಿದೆ ಎಂದು ದೂರಿದರು. ಭಾರತೀಯತೆಯನ್ನು ಕೇವಲ 75 ವರ್ಷಗಳ ಹಿಂದಿನ ಒಪ್ಪಂದಕ್ಕೆ ಸೀಮಿತಗೊಳಿಸಿ, ದೇಶಕ್ಕೆ ಯಾವುದೇ ಪ್ರಾಚೀನ ಅಥವಾ ಇತಿಹಾಸಪೂರ್ವದ ಅಖಂಡ ಸಾಂಸ್ಕೃತಿಕ ಅಸ್ಮಿತೆ ಇಲ್ಲ ಎಂದು ಜಾಗತಿಕವಾಗಿ ಬಿಂಬಿಸುವುದೇ ಈ ಇಡೀ ಅಭಿಯಾನದ ಮುಖ್ಯ ಕಾರ್ಯಸೂಚಿಯಾಗಿದೆ. ದೇಶದ ಆಂತರಿಕ ವಿಚಾರಗಳನ್ನು ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮಾತನಾಡುವ ಹಿಂದಿರುವ ನೈಜ ಉದ್ದೇಶ ಏನಿರಬಹುದೆಂಬುದನ್ನು ಓದುಗರೇ ಊಹಿಸಿಕೊಳ್ಳಬೇಕಿದೆ.

ವಸಾಹತುಶಾಹಿ ಚಿಂತಕರ ಆಷಾಢಭೂತಿತನ

ಇದೇ ಧಾಟಿಯ ವಸಾಹತುಶಾಹಿ ಚಿಂತಕರು ಬ್ರಿಟಿಷರು ಭೌತಿಕವಾಗಿ ದೇಶವನ್ನು ಒಂದು ಮಾಡಿದರೆ, ನಂತರ 1915ರಲ್ಲಿ ಭಾರತಕ್ಕೆ ಬಂದ ಮಹಾತ್ಮಾ ಗಾಂಧೀಜಿಯವರು ಜನಸಾಮಾನ್ಯರನ್ನು ಒಟ್ಟುಗೂಡಿಸಿ ಆಧುನಿಕ ರಾಷ್ಟ್ರ ಸೃಷ್ಟಿಸಿದರು ಎನ್ನುತ್ತಾರೆ. ಆದರೆ, ಈ ವಾದಕ್ಕೆ ಸ್ವತಃ ಗಾಂಧೀಜಿಯವರೇ ತಮ್ಮ ಪ್ರಸಿದ್ಧ ಹಿಂದ್ ಸ್ವರಾಜ್ (1909) ಪುಸ್ತಕದಲ್ಲಿ ನೂರಕ್ಕೂ ಹೆಚ್ಚು ವರ್ಷಗಳ ಹಿಂದೆಯೇ ಹೀಗೆ ಸ್ಪಷ್ಟ ಉತ್ತರ ನೀಡಿದ್ದಾರೆ:

ಬ್ರಿಟಿಷರು ಭಾರತವನ್ನು ಒಂದು ರಾಷ್ಟ್ರವನ್ನಾಗಿ ಮಾಡಿದರು ಎಂದು ನಮಗೆ ಕಲಿಸಿಕೊಡಲಾಗಿದೆ. ಆದರೆ ಬ್ರಿಟಿಷರು ಬರುವ ಮೊದಲೇ ನಾವು ಒಂದೇ ರಾಷ್ಟ್ರವಾಗಿದ್ದೆವು. ನಮ್ಮ ಆಲೋಚನೆಗಳು

ಒಂದೇ ಆಗಿದ್ದವು. ಬ್ರಿಟಿಷರು ಬಂದ ಮೇಲೆ ನಮ್ಮ ನಡುವೆ ಕೃತಕ ಗಡಿಗಳನ್ನು ಸೃಷ್ಟಿಸಿದರು. ನಮ್ಮ ಪೂರ್ವಜರು ದೇಶದ ನಾಲ್ಕೂ ಮೂಲೆಗಳಲ್ಲಿ, ಚಾರ್ ಧಾಮ್ ಪುಣ್ಯಕ್ಷೇತ್ರಗಳನ್ನು ಅಂದರೆ ದಕ್ಷಿಣದಲ್ಲಿ ರಾಮೇಶ್ವರಂ, ಪಶ್ಚಿಮದಲ್ಲಿ ದ್ವಾರಕಾ, ಪೂರ್ವದಲ್ಲಿ ಜಗನ್ನಾಥ ಪುರಿ ಮತ್ತು ಉತ್ತರದಲ್ಲಿ ಬದರಿನಾಥ್ ಸ್ಥಾಪಿಸಿದಾಗಲೇ ಅವರಿಗೆ ರಾಷ್ಟ್ರೀಯ ಏಕತೆ ಮತ್ತು ಭೌಗೋಳಿಕ ಅಖಂಡತೆಯ ಕಲ್ಪನೆ ಇತ್ತು. ರೈಲು ಬರುವ ಸಾವಿರಾರು ವರ್ಷಗಳ ಮುನ್ನವೇ ಭಾರತೀಯರು ಇಡೀ ದೇಶವನ್ನು ಮಾತೃಭೂಮಿ ಎಂದು ಭಾವಿಸಿ ಕಾಲ್ನಡಿಗೆಯಲ್ಲೇ ಯಾತ್ರೆ ಮಾಡುತ್ತಿದ್ದರು ಮತ್ತು ಭಾವನಾತ್ಮಕವಾಗಿ ಒಂದಾಗಿದ್ದರು.

ಯಾರನ್ನು ಆಧುನಿಕ ಭಾರತದ ನಿರ್ಮಾತೃ ಎಂದು ಕರೆಯಲಾಗುತ್ತದೆಯೋ, ಅದೇ ಮಹಾತ್ಮಾ ಗಾಂಧೀಜಿಯವರು ಭಾರತದ ಸಾಂಸ್ಕೃತಿಕ ಅಖಂಡತೆಯು ಬ್ರಿಟಿಷರ ಆಡಳಿತಕ್ಕಿಂತ ಹಾಗೂ ಆಧುನಿಕ ಸಾಂವಿಧಾನಿಕ ಒಪ್ಪಂದಕ್ಕಿಂತ ಮೊದಲೇ ಶತಶತಮಾನಗಳಿಂದ ಜೀವಂತವಾಗಿತ್ತು ಎಂದು ಸ್ಪಷ್ಟಪಡಿಸಿರುವುದು ಇಂದಿನ ಇತಿಹಾಸದ ಅಪವ್ಯಾಖ್ಯಾನಕಾರರಿಗೆ ಅತಿ ದೊಡ್ಡ ಬೌದ್ಧಿಕ ಹಿನ್ನಡೆಯಾಗಿದೆ. ಆದರೆ ಈ ವಸಾಹತುಶಾಹಿ ಚಿಂತಕರು ಗಾಂಧೀಜಿಯವರು ಭಾರತವನ್ನು ಒಗ್ಗೂಡಿಸಿದರೆಂದು ಹೇಳುವಾಗ ಅವರುಗಳು ಗಾಂಧೀಜಿಯವರನ್ನು ಸಂಪೂರ್ಣವಾಗಿ ಓದಿದ್ದಾರೆಯೇ ಅಥವಾ ಅದು ಅವರ ಆಷಾಢಭೂತಿತನವೇ ಎಂಬ ಪ್ರಶ್ನೆ ಮೂಡದೆ ಇರದು.

ಪ್ರಾಚೀನ ವಾಙ್ಮಯದಲ್ಲಿ ಭಾರತದ ನಿಖರ ಚಿತ್ರಣ: ಭಾರತದ ಪರಿಕಲ್ಪನೆ ಆಧುನಿಕ ಜಗತ್ತು ಕೊಟ್ಟಿದ್ದು ಎಂಬ ಮಾರ್ಕ್ಸ್‌ವಾದಿಗಳ ವಾದವನ್ನು ನಮ್ಮ ಪ್ರಾಚೀನ ವೈದಿಕ ಮತ್ತು ಪೌರಾಣಿಕ ವಾಙ್ಮಯಗಳು ಸಂಪೂರ್ಣವಾಗಿ ಸುಳ್ಳು ಎಂದು ಸಾಬೀತುಪಡಿಸುತ್ತವೆ. ವಿಷ್ಣು ಪುರಾಣವು ಭಾರತದ ಭೌಗೋಳಿಕ ಗಡಿಯನ್ನು ಇಂದಿನ ನಕ್ಷೆಯಷ್ಟೇ ನಿಖರವಾಗಿ ನಿರೂಪಿಸಿದೆ:

ಉತ್ತರಂ ಯತ್ಸಮುದ್ರಸ್ಯ ಹಿಮಾದ್ರೇಶ್ಚೈವ ದಕ್ಷಿಣಮ್।
ವರ್ಷಂ ತದ್ ಭಾರತಂ ನಾಮ ಭಾರತಿ ಯತ್ರ ಸಂತತಿಃ ॥

(ಯಾವ ಭೂಭಾಗವು ಸಮುದ್ರಕ್ಕೆ ಉತ್ತರದಲ್ಲಿದೆಯೋ ಮತ್ತು ಹಿಮಾಲಯಕ್ಕೆ ದಕ್ಷಿಣದಲ್ಲಿದೆಯೋ, ಅದೇ ಭಾರತವರ್ಷ; ಅಲ್ಲಿನ ಪ್ರಜೆಗಳೇ ಭಾರತಿ). ಇದು ಕೇವಲ ಮಣ್ಣಿನ ತುಂಡನ್ನು ಗುರುತಿಸದೆ, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ವಾಸಿಸುವ ಇಡೀ ಜನಸಮುದಾಯವನ್ನು ಒಂದೇ ಸಾಂಸ್ಕೃತಿಕ ಮತ್ತು ರಾಷ್ಟ್ರೀಯ ಅಸ್ಮಿತೆಯಡಿ ತರುತ್ತದೆ.

ಇದಲ್ಲದೆ, ಅತ್ಯಂತ ಪ್ರಾಚೀನ ಗ್ರಂಥವಾದ ಋಗ್ವೇದದ ನದೀಸೂಕ್ತವು (10ನೇ ಮಂಡಲ, ಸೂಕ್ತ 75) ಇಂದಿನ ಅಫ್ಘಾನಿಸ್ತಾನದ ಕಾಬೂಲ್ (ಕುಭಾ), ಕುರ್ರಮ್ (ಕ್ರುಮು), ಗೋಮಲ್ (ಗೋಮತೀ) ಮತ್ತು ಆಮು ದಾರ್ಯಾ (ರಸಾ) ನದಿಗಳಿಂದ ಹಿಡಿದು ಭಾರತದ ಸಿಂಧೂ, ಸರಸ್ವತಿ, ಗಂಗಾ ಮತ್ತು ಯಮುನಾ ನದಿಗಳನ್ನು ಒಂದೇ ಸೂಕ್ತದಲ್ಲಿ ಸ್ತುತಿಸುವ ಮೂಲಕ ಇಡೀ ಉಪಖಂಡವನ್ನು ಒಂದೇ ಸಾಂಸ್ಕೃತಿಕ ಘಟಕವಾಗಿ ನೋಡಿದೆ.

ಮೂಲ ಸರಸ್ವತಿ ನದಿ ಬತ್ತಿಹೋದರೂ, ಭಾರತೀಯರು ತಮ್ಮ ಸಾಂಸ್ಕೃತಿಕ ಗುರುತನ್ನು ಉಳಿಸಿಕೊಳ್ಳಲು ದೇಶದಾದ್ಯಂತ ಅನೇಕ ಸಣ್ಣ ನದಿಗಳಿಗೆ ಸರಸ್ವತಿ ಎಂದೇ ಹೆಸರಿಟ್ಟಿರುವುದು ಹೆಮ್ಮೆಯ ವಿಷಯ. ಉತ್ತರಾಖಂಡ, ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತ್ ಮುಂತಾದ ರಾಜ್ಯಗಳಲ್ಲಿ ಸರಸ್ವತಿ ಹೆಸರಿನ ಉಪನದಿಗಳಿವೆ. ಅಷ್ಟೇ ಅಲ್ಲದೆ, ತ್ರಿಪುರದಲ್ಲಿ ಸರಸ್ವತಿ ಚಾರ ಎಂಬ ತೊರೆಯೂ, ಕೇರಳದಲ್ಲಿ ಸರಸ್ವತಿ ತೋಡ್ ಎಂಬ ಜಲಮೂಲವೂ ಇವೆ. ಪ್ರಯಾಗರಾಜದ ತ್ರಿವೇಣಿ ಸಂಗಮದಲ್ಲಿ ಸರಸ್ವತಿಯು ಗುಪ್ತಗಾಮಿನಿಯಾಗಿ ಗಂಗೆ ಮತ್ತು ಯಮುನೆಯನ್ನು ಸೇರುತ್ತಾಳೆ ಎಂಬ ನಂಬಿಕೆಯಿದೆ. ಅದೇ ರೀತಿ ಕರ್ನಾಟಕದ ಭಾಗಮಂಡಲದಲ್ಲೂ ಸರಸ್ವತಿಯು ಕಾವೇರಿ ಮತ್ತು ಕನ್ನಿಕೆಯ ಜೊತೆ ಸಂಗಮವಾಗುತ್ತಾಳೆ ಎಂಬ ನಂಬಿಕೆಯಲ್ಲೇ ಋಗ್ವೇದದ ಆ ನದಿಯನ್ನು ಪೂಜಿಸಲಾಗುತ್ತಿದೆ. ದೇಶದ ಮೂಲೆ ಮೂಲೆಗಳಲ್ಲಿರುವ ಈ ನಂಬಿಕೆಯು, ಭಾರತೀಯರೆಲ್ಲರೂ ಒಂದೇ ಮತ್ತು ಭಾರತವು ಅತ್ಯಂತ ಪ್ರಾಚೀನವಾದ ಅಖಂಡ ರಾಷ್ಟ್ರ ಎಂಬುದಕ್ಕೆ ಸಾಕ್ಷಿಯಾಗಿದೆ.

ಮಹಾಭಾರತದ ಭೀಷ್ಮ ಪರ್ವದಲ್ಲಂತೂ ಇಡೀ ಭಾರತದ ನದಿ, ಪರ್ವತ ಹಾಗೂ ಪ್ರಾಂತ್ಯಗಳ ಸುದೀರ್ಘ ಪಟ್ಟಿಯಿದ್ದು, ಕುರುಕ್ಷೇತ್ರ ಯುದ್ಧದಲ್ಲಿ ಅಫ್ಘಾನಿಸ್ತಾನದ ಗಾಂಧಾರದಿಂದ ಹಿಡಿದು ಅಸ್ಸಾಂ ಹಾಗೂ ದಕ್ಷಿಣದ ಚೋಳ, ಚೇರ, ಪಾಂಡ್ಯ ರಾಜರೆಲ್ಲರೂ ಭಾಗವಹಿಸಿದ್ದು ದೇಶದ ಸಾಂಸ್ಕೃತಿಕ ಮತ್ತು ರಾಜಕೀಯ ಒಗ್ಗಟ್ಟನ್ನು ಸಾಬೀತುಪಡಿಸುತ್ತದೆ. ಭಾಗವತ ಪುರಾಣವು ಭಾರತವನ್ನು ದೇವತೆಗಳೂ ಬಯಸುವ ಪರಮ ಪವಿತ್ರ ಕರ್ಮಭೂಮಿ ಎಂದರೆ, ಕ್ರಿ.ಪೂ. 4ನೇ ಶತಮಾನದಲ್ಲೇ ಚಾಣಕ್ಯನು ತನ್ನ ಅರ್ಥಶಾಸ್ತ್ರದಲ್ಲಿ ಹಿಮಾಲಯದಿಂದ ಸಮುದ್ರದವರೆಗಿನ ಭೂಭಾಗವನ್ನು ಒಬ್ಬ ಚಕ್ರವರ್ತಿಯು ಆಳಬೇಕಾದ ಏಕೈಕ ದೇಶ (ಚಕ್ರವರ್ತಿ ಕ್ಷೇತ್ರ) ಎಂದು ಸ್ಪಷ್ಟಪಡಿಸಿದ್ದಾನೆ.

ಸ್ಥಿರವಾಗಿ ಉಳಿಯುವ ಸಾಂಸ್ಕೃತಿಕ ಅಂತಃಸತ್ವ

ಇತಿಹಾಸದುದ್ದಕ್ಕೂ ರಾಜಕೀಯ ಅಧಿಕಾರಗಳು ಮತ್ತು ಸಾಮ್ರಾಜ್ಯಗಳು ಬದಲಾದಂತೆ ದೇಶದ ಆಡಳಿತಾತ್ಮಕ ಗಡಿಗಳು ಬದಲಾಗಿರಬಹುದು; ಮೌರ್ಯರು, ಗುಪ್ತರು, ಚೋಳರು ಅಥವಾ ಮೊಘಲರ ಕಾಲದಲ್ಲಿ ರಾಜಕೀಯ ನಕ್ಷೆಗಳು ಏರಿಳಿತ ಕಂಡಿರುವುದು ಐತಿಹಾಸಿಕ ಸತ್ಯ. ಆದರೆ, ದೇಶವು ನೂರಾರು ಸಂಸ್ಥಾನಗಳಾಗಿ ವಿಭಜನೆಗೊಂಡಿದ್ದ ಅತ್ಯಂತ ಕಠಿಣ ಕಾಲದಲ್ಲೂ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಸಾಮಾನ್ಯ ಜನರಲ್ಲಿ ತಾವೆಲ್ಲರೂ ಒಂದೇ ಭಾರತವರ್ಷದ ಭಾಗ ಎಂಬ ದೃಢವಾದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಪ್ರ

2029ರ ಲೋಕಸಭೆ ಚುನಾವಣೆಯಿಂದಲೇ ಸಾಧ್ಯತೆ: ಪಿ.ಪಿ.ಚೌಧರಿ ಸುಳಿವು

ಒಂದು ರಾಷ್ಟ್ರ ಒಂದು ಚುನಾವಣೆ ಜಾರಿಗೆ

• ಪ್ರಜೋದಯ ವರದಿ

ನವದೆಹಲಿ: 2029ರ ಲೋಕಸಭೆ ಚುನಾವಣೆಯಿಂದಲೇ 'ಒಂದು ರಾಷ್ಟ್ರ ಒಂದು ಚುನಾವಣೆ' ಜಾರಿಗೆ ತರಬಹುದು ಎಂದು ಜಂಟಿ ಸಂಸದೀಯ ಸಮಿತಿ ಅಧ್ಯಕ್ಷ ಪಿ.ಪಿ. ಚೌಧರಿ ಶುಕ್ರವಾರ ಮಾಹಿತಿ ನೀಡಿದ್ದಾರೆ.

ಗೋವಾದಲ್ಲಿ ನಡೆದ ಜೆಪಿಸಿಯ ಎರಡು ದಿನಗಳ ಸಭೆಯ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2029ರ ಲೋಕಸಭೆ ಚುನಾವಣೆಯಿಂದಲೇ ಈ ಸುಧಾರಣೆಯನ್ನು ಜಾರಿಗೆ ತರುವಂತಹ ಕಾರ್ಯವಿಧಾನ ರೂಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುತ್ತಿದೆ. ಪ್ರಸ್ತಾವಿತ ಚುನಾವಣಾ ಸುಧಾರಣೆಗೆ ವ್ಯಾಪಕ ಒಮ್ಮತ ಮೂಡಿಸುವ ಉದ್ದೇಶದಿಂದ ದೇಶದಾದ್ಯಂತ ವಿವಿಧ ವಲಯಗಳ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದರಲ್ಲದೆ, ಇದುವರೆಗೆ ಸಮಾಲೋಚನೆ ನಡೆಸಿದ ನಾಗರಿಕ ಸಮಾಜದ ಸುಮಾರು ಶೇ.99ರಷ್ಟು ಪ್ರತಿನಿಧಿಗಳು ಈ ಪ್ರಸ್ತಾವನೆಗೆ ಬೆಂಬಲ ವ್ಯಕ್ತಪಡಿಸಿದ್ದಾರೆ ಎಂದು ಅವರು ಹೇಳಿದರು.

ಶುಕ್ರವಾರ ಸಮಿತಿಯು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಹಾಗೂ ಅವರ ಸಚಿವ ಸಂಪುಟದ ಸದಸ್ಯರೊಂದಿಗೆ ಸಭೆ ನಡೆಸಿ, ಏಕಕಾಲದಲ್ಲಿ ಚುನಾವಣೆ ಜಾರಿಗೊಳಿಸುವ ಸಂದರ್ಭದಲ್ಲಿ ಎದುರಾಗಬಹುದಾದ ಸವಾಲುಗಳು ಮತ್ತು ಅವುಗಳನ್ನು ನಿವಾರಿಸುವ ಮಾರ್ಗಗಳ ಕುರಿತು ಅಭಿಪ್ರಾಯ ಸಂಗ್ರಹಿಸಿತು.

ಗೋವಾದ ಜನರನ್ನು ಪ್ರತಿನಿಧಿಸುವ ಮುಖ್ಯಮಂತ್ರಿ ಹಾಗೂ ಸಚಿವ ಸಂಪುಟ ಸದಸ್ಯರೊಂದಿಗೆ ಅನೌಪಚಾರಿಕವಾಗಿ ಚರ್ಚೆ ನಡೆಸಿದ್ದೇವೆ. 'ಒಂದು ರಾಷ್ಟ್ರ ಒಂದು ಚುನಾವಣೆ'ಯನ್ನು ಹೇಗೆ ಜಾರಿಗೊಳಿಸಬಹುದು, ಯಾವ ಸವಾಲುಗಳಿವೆ ಹಾಗೂ ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಅವುಗಳನ್ನು ಹೇಗೆ ನಿವಾರಿಸಬಹುದು ಎಂಬ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದು ಚೌಧರಿ ಹೇಳಿದರು.

ರಾಜಸ್ಥಾನದ ಪಾಲಿ ಲೋಕಸಭಾ ಕ್ಷೇತ್ರದ ಬಿಜೆಪಿ ಸಂಸದರಾಗಿರುವ ಚೌಧರಿ, ಗುಜರಾತ್, ಕರ್ನಾಟಕ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ ಹಾಗೂ ದೆಹಲಿಯಲ್ಲಿಯೂ ಸಂವಿಧಾನ ತಜ್ಞರು, ನಾಗರಿಕ ಸಮಾಜದ ಸಂಘಟನೆಗಳು, ಶಿಕ್ಷಣ ತಜ್ಞರು

ಹಾಗೂ ಇತರ ಪಾಲುದಾರರೊಂದಿಗೆ ಸಮಾಲೋಚನೆ ನಡೆಸಲಾಗಿದೆ ಎಂದರು.

ಇದುವರೆಗೆ ಸಮಾಲೋಚನೆ ನಡೆಸಿದ ನಾಗರಿಕ ಸಮಾಜ ಹಾಗೂ ವಿವಿಧ ಸಂಘಟನೆಗಳ ಸುಮಾರು ಶೇ.99ರಷ್ಟು ಪ್ರತಿನಿಧಿಗಳು ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕೆ ಬೆಂಬಲ ವ್ಯಕ್ತಪಡಿಸಿದ್ದಾರೆ. ಈಗ ಎಲ್ಲ ರಾಜಕೀಯ ಪಕ್ಷಗಳಿಗೂ ಒಪ್ಪಿಗೆಯಾಗುವಂತಹ ಕಾರ್ಯವಿಧಾನ ರೂಪಿಸುವುದು ನಮ್ಮ ಪ್ರಯತ್ನವಾಗಿದೆ ಎಂದರು.

2029ರಲ್ಲೇ ಜಾರಿ ಸಾಧ್ಯತೆ

ಜಾರಿಗೆ ಸಂಬಂಧಿಸಿದ ವೇಳಾಪಟ್ಟಿಯ ಕುರಿತು ಮಾತನಾಡಿದ ಅವರು, ವಿವಿಧ ಆಯ್ಕೆಗಳನ್ನು ಸಮಿತಿಯು ಪರಿಶೀಲಿಸುತ್ತಿದ್ದು, 2029ರ ಮುಂದಿನ ಲೋಕಸಭೆ ಚುನಾವಣೆಯ ವೇಳೆಗೆ ಈ ಸುಧಾರಣೆ ಜಾರಿಯಾಗುವ ಸಾಧ್ಯತೆ ಇದೆ ಎಂದು ಸೂಚಿಸಿದರು. ಅದಕ್ಕೂ ಮುನ್ನ, ಕೆಲವು ರಾಜ್ಯಗಳ ರಾಜಕೀಯ ಪಕ್ಷಗಳು ಹಾಗೂ ಮುಖ್ಯಮಂತ್ರಿಗಳು ಸ್ವಯಂಪ್ರೇರಿತವಾಗಿ ತಮ್ಮ ಚುನಾವಣಾ ಚಕ್ರವನ್ನು ಹೊಂದಾಣಿಕೆ ಮಾಡಿಕೊಳ್ಳಲು ಒಪ್ಪಿದರೆ ಆ ರಾಜ್ಯಗಳಲ್ಲಿ ಮೊದಲ ಹಂತದಲ್ಲೇ ಏಕಕಾಲದಲ್ಲಿ ಚುನಾವಣೆ ನಡೆಸುವ ಸಾಧ್ಯತೆಯೂ ಇದೆ ಎಂದು ಅವರು ಹೇಳಿದರು.

7 ಲಕ್ಷ ಕೋಟಿ ರೂ. ಆರ್ಥಿಕ ನಷ್ಟ ತಪ್ಪುತ್ತದೆ

ಏಕಕಾಲದಲ್ಲಿ ಚುನಾವಣೆ ನಡೆಸುವ ಆರ್ಥಿಕ ಪ್ರಯೋಜನಗಳನ್ನು ಉಲ್ಲೇಖಿಸಿದ ಚೌಧರಿ, ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಉನ್ನತ ಮಟ್ಟದ ಸಮಿತಿಗೆ ಸಲ್ಲಿಸಲಾದ ಅಧ್ಯಯನ ವರದಿಯನ್ನು ಉಲ್ಲೇಖಿಸಿದರು. ದೇಶದಾದ್ಯಂತ ಪ್ರತ್ಯೇಕವಾಗಿ ಚುನಾವಣೆ ನಡೆಸುವುದರಿಂದ ಸುಮಾರು 7 ಲಕ್ಷ ಕೋಟಿ ಮೌಲ್ಯದ ಆರ್ಥಿಕ ನಷ್ಟ ಉಂಟಾಗುತ್ತದೆ. ಆದರೆ ಏಕಕಾಲದಲ್ಲಿ ಚುನಾವಣೆ ನಡೆಸು ವುದರಿಂದ ಅಷ್ಟೇ ಪ್ರಮಾಣದ ಆರ್ಥಿಕ ಲಾಭವಾಗಬಹುದು ಎಂದು ಅಧ್ಯಯನದಲ್ಲಿ ಅಂದಾಜಿಸಲಾಗಿದೆ ಎಂದು ಹೇಳಿದರು.

ಇಂದು ಚುನಾವಣೆಗಳು ಒಂದು ರಾಜ್ಯಕ್ಕೆ ಮಾತ್ರ ಸೀಮಿತವಾಗಿಲ್ಲ, ದೇಶದ ಯಾವುದೇ ಭಾಗದಲ್ಲಿ ಚುನಾವಣೆ ನಡೆದರೂ ಅದರ ಪರಿಣಾಮ ಇತರ ರಾಜ್ಯಗಳ ಮೇಲೂ ಬೀಳುತ್ತದೆ. ಏಕೆಂದರೆ ಆರ್ಥಿಕತೆ ಪರಸ್ಪರ ಅವಲಂಬಿತವಾಗಿದೆ ಎಂದು ಹೇಳಿದರು.

ಉದಾಹರಣೆಗೆ ಗೋವಾವನ್ನು ಉಲ್ಲೇಖಿಸಿದ ಅವರು, ದೊಡ್ಡ ರಾಜ್ಯಗಳಲ್ಲಿ ಚುನಾವಣೆ ನಡೆದಾಗ ಗೋವಾಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆಯ ಮೇಲೆ ಪರಿಣಾಮ ಬೀಳುತ್ತದೆ. ಅದೇ ರೀತಿ ಗೋವಾದಲ್ಲೇ ಚುನಾವಣೆ ನಡೆದರೂ ಅಲ್ಲಿನ ಪ್ರವಾಸೋದ್ಯಮದ ಮೇಲೆ ಪರಿಣಾಮ ಉಂಟಾಗುತ್ತದೆ ಎಂದು ಹೇಳಿದರು.

ಇಂದಿನ ಆರ್ಥಿಕತೆ ಜಾಗತೀಕರಣಗೊಂಡಿದೆ. ಒಂದು ರಾಜ್ಯದಲ್ಲಿ ಉಂಟಾಗುವ ಪ್ರತಿಕೂಲ ಪರಿಣಾಮ ಇತರ ರಾಜ್ಯಗಳ ಮೇಲೂ ಬೀಳುತ್ತದೆ. ಆಗಾಗ ನಡೆಯುವ ಚುನಾವಣೆಗಳು ರಾಜ್ಯದ ಗಡಿಗಳನ್ನು ಮೀರಿ ಆರ್ಥಿಕ ಪರಿಣಾಮ ಉಂಟು ಮಾಡುತ್ತವೆ, ಎಂದು ಅವರು ಹೇಳಿದರು.

ಆಗಾಗ ನಡೆಯುವ ಚುನಾವಣೆಗಳು ಆಡಳಿತ ವ್ಯವಸ್ಥೆಗೂ ಅಡ್ಡಿಯಾಗುತ್ತವೆ ಮತ್ತು ಶಿಕ್ಷಣ ಕ್ಷೇತ್ರದ ಮೇಲೂ ಪರಿಣಾಮ ಬೀರುತ್ತವೆ ಎಂದು ಚೌಧರಿ ಅವರು ಅಭಿಪ್ರಾಯಪಟ್ಟರು.

'ಅರಕಲಗೂಡು' ಬರಪೀಡಿತ ಎಂದು ಘೋಷಿಸಿ

ರೈತರ ಸಾಲ ಮನ್ನಾ ಮಾಡಲು ಆಗ್ರಹಿಸಿ ಪ್ರತಿಭಟನೆ

• ಪ್ರಜೋದಯ ವರದಿ

ಅರಕಲಗೂಡು: ಸರ್ಕಾರ ತಾಲ್ಲೂಕನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಿ ರೈತರ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿ ರೈತ ಸಂಘ ಹಾಗೂ ಹಸಿರುಸೇನೆ ಕಾರ್ಯಕರ್ತರು ಶುಕ್ರವಾರ ತಾಲ್ಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದರು.

ಗ್ರಾಮ ದೇವತೆ ದೊಡ್ಡಮ್ಮ ದೇವಾಲಯದ ಬಳಿ ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು ಘೋಷಣೆಗಳನ್ನು ಕೂಗುತ್ತಾ ತಾಲ್ಲೂಕು ಕಚೇರಿಗೆ ತೆರಳಿದರು.

ತಾಲ್ಲೂಕು ರೈತ ಸಂಘದ ಅಧ್ಯಕ್ಷ ಎಚ್.ಎಚ್.ಭುವನೇಶ್ ಅವರು ಮಾತನಾಡಿ, ತಾಲ್ಲೂಕಿನಲ್ಲಿ ಈ ಬಾರಿ ಮಳೆ ಕೊರತೆ ಇದ್ದು ಜೂನ್ ತಿಂಗಳಲ್ಲಿ ಮಳೆ ಬೀಳದೆ ರೈತರು ಬಿತ್ತನೆ ಕಾರ್ಯ ನಡೆಸಲು ಸಾಧ್ಯವಾಗಿಲ್ಲ, ಕಳೆದ ಜನವರಿಯಿಂದ ಈ ವರೆಗೆ ವಾಡಿಕೆಗಿಂತ ಶೇ.67 ರಷ್ಟು ಮಳೆ ಕೊರತೆ ಇದ್ದು ಕೇವಲ ಶೇ 13 ರಷ್ಟು ಬಿತ್ತನೆ ಕಾರ್ಯ ನಡೆದಿದೆ. ಬಿತ್ತನೆಯಾದ ಬೆಳೆಗಳೂ ಸಹ ನೀರಿನ ಕೊರತೆ ಮತ್ತು ಕೀಟಬಾದೆಯಿಂದ ಹಾಳಾಗಿದ್ದು ಯಾವುದೇ ಬೆಳೆ ರೈತನ ಕೈಹಿಡಿದಿಲ್ಲ. ಹೀಗಾಗಿ ತಾಲ್ಲೂಕನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕು.ಈ ಕುರಿತು ಅಧಿಕಾರಿಗಳು ಸರ್ಕಾರಕ್ಕೆ ವರದಿ ನೀಡಬೇಕು. ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ರೈತರ ರೂ 2 ಲಕ್ಷ ಸಾಲ ಮನ್ನಾಮಾಡಬೇಕು ಎಂದು ಆಗ್ರಹಿಸಿದರು.

ಮಲೆನಾಡು ಭಾಗದಲ್ಲಿ ಇತ್ತೀಚೆಗೆ ಬಿದ್ದ ಮಳೆಯಿಂದ ಹೇಮಾವತಿ ಜಲಾಶಯಕ್ಕೆ ನೀರು ಹರಿದು ಬರುತ್ತಿದ್ದು ನಾಲೆಗಳ ಮೂಲಕ ನೀರು ಹರಿಸಿ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಮೂಲಕ ಜಾನುವಾರುಗಳಿಗೆ ಕುಡಿಯುವ ನೀರು ಒದಗಿಸಲು ಕ್ರಮ ಕೈಗೊಳ್ಳುವಂತೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಬಳಿಕ ತಹಶೀಲ್ದಾರ್ ಕೆ.ಸಿ.ಸೌಮ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಮುಖಂಡರಾದ ಹೊಂಬೇಗೌಡ, ಪುರುಷೋತ್ತಮಗೌಡ, ಹಲಗಣ್ಣ, ರಮೇಶ್, ಗುಂಡಣ್ಣ, ಮರೀಗೌಡ, ಸ್ವಾಮಿಗೌಡ, ರಾಜೇಗೌಡ, ಮಹದೇವಪ್ಪ, ಅಶೋಕ್, ಚಂದ್ರಪ್ಪ, ಹನುಮಂತೇಗೌಡ ಇತರರಿದ್ದರು.

ಹೊಳೆನರಸೀಪುರ ತಾಲ್ಲೂಕಿನ ಹಳ್ಳಿಮೈಸೂರಿನಲ್ಲಿ ಪ್ರಾಣಿಗಳಿಂದ ಮನುಷ್ಯರಿಗೆ ಹರಡಬಹುದಾದ ರೋಗ ತಡೆ ದಿನ ಆಚರಿಸಿದ ಕೃಷಿಕ ಸಮಾಜದ ನವದೆಹಲಿ ಪ್ರತಿನಿಧಿ ಬೆಳಗವಾಡಿ ಸತೀಶ್ ಅವರು ಈ ಸಂದರ್ಭದಲ್ಲಿ ರೈತರಿಗೆ ಅರಿವು ಮೂಡಿಸಿ ನೆರೆದಿದ್ದವರಿಗೆ ಸಿಂಪಡಣಾ ದ್ರಾವಣ ವಿತರಿಸಿದರು.

ಆಲೂರು: ಕಸಬಾ ಭರತವಳ್ಳಿ ಸಮೀಪವಿರುವ ಪುಣ್ಯಭೂಮಿ ಸಂಸ್ಥೆ ಮುಖ್ಯಸ್ಥರು ಹಾಗೂ ಆಕಾಶವಾಣಿ ನಿವೃತ್ತ ಮುಖ್ಯಸ್ಥರಾದ ಡಾ. ವಿಜಯ್ ಅಂಗಡಿಯವರಿಗೆ, ಪ್ರಸಕ್ತ ಸಾಲಿನ ಡಾ. ಜಿ. ಮಾದೇಗೌಡ ರಾಜ್ಯಮಟ್ಟದ ಸಾವಯವ ಕೃಷಿಕ ಪ್ರಶಸ್ತಿಯನ್ನು ಮಂಡ್ಯ ಗಾಂಧಿಭವನದಲ್ಲಿ ವಿಧಾನಪರಿಷತ್ ಉಪ ಸಭಾಪತಿ ಬಸವರಾಜ ಹೊರಟ್ಟಿ ರವರು ಪ್ರದಾನ ಮಾಡಿದರು. ವಿದಾನಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಉಪಸ್ಥಿತರಿದ್ದರು.

ಮುಜರಾಯಿ ಇಲಾಖೆಗೆ ಶನೇಶ್ವರ ದೇಗುಲ ಸೇರಿಸಿ

ಲೆಕ್ಕಪತ್ರ ನೀಡದೆ ಕಳ್ಳಾಟ: ಕರ್ನಾಟಕ ಪ್ರಾಂತ ರೈತ ಸಂಘ ಆರೋಪ

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ತಾಲ್ಲೂಕಿನ ಜಿನ್ನೇನಹಳ್ಳಿ ಗ್ರಾಮದ ಶನೇಶ್ವರ ದೇಗುಲವನ್ನು ಟ್ರಸ್ಟ್ ಇಲ್ಲದೇ ಮುಜರಾಯಿ ಇಲಾಖೆಗೆ ಸೇರಿಸಬೇಕು ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಗೌರವಾಧ್ಯಕ್ಷ ಚಂದ್ರಹಾಸ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ನೂರಾರು ವರ್ಷಗಳ ಹಿನ್ನೆಲೆ ಇರುವ ದೇವಾಲಯವನ್ನು 2013ರಲ್ಲಿ ಜೀರ್ಣೋದ್ಧಾರಗೊಳಿಸಿ ಜಿನ್ನೇನಹಳ್ಳಿ ಗ್ರಾಮದ ಮಧುಸೂದನ್ ಅವರನ್ನು ದೇವಸ್ಥಾನದ ನಿರ್ವಹಣಾ ಕಾರ್ಯ ವನ್ನು ನೋಡಿಕೊಳ್ಳಲು ನೇಮಿಸಲಾಗಿತ್ತು ಎಂದರು.

ದೇಗುಲಕ್ಕೆ ಸಂಬಂಧಪಟ್ಟ 7.5 ಲಕ್ಷ ರೂ. ಗಳನ್ನು ತಮ್ಮ ವೈಯಕ್ತಿಕ ಖಾತೆಗೆ ಇರಿಸಿಕೊಂಡಿದ್ದು, ಕಳೆದ 13 ವರ್ಷದ ಲೆಕ್ಕಪತ್ರಗಳನ್ನು ಸರಿಯಾಗಿ ನೀಡ ದಿರುವುದು ಹಲವು ಅನುಮಾನಗಳನ್ನು ಸೃಷ್ಟಿಸುತ್ತಿದೆ ಎಂದು

ಅವರು ತಿಳಿಸಿದರು.

ಗ್ರಾಮದ ಸರ್ವೆ ನಂಬರ್ 8 ಮತ್ತು 9 ರಲ್ಲಿ 1.14 ಎಕರೆ ಸರ್ಕಾರಿ ಗೋಮಾಳದಲ್ಲಿ ನೂರಾರು ವರ್ಷಗಳ ಹಳೆಯ ದೇಗುಲ ಇದೆ. 2013ರಲ್ಲಿ ಗ್ರಾಮಸ್ಥರ ಹಾಗೂ ದಾನಿಗಳ ಸಹಕಾರದಿಂದ ಅಭಿವೃದ್ಧಿಗೊಳಿಸಲಾಗಿದೆ. ಹಂತ -ಹಂತವಾಗಿ ಅಭಿವೃದ್ಧಿಗೊಳ್ಳುತ್ತಿರುವ ದೇಗುಲವನ್ನು ನೋಡಿಕೊಳ್ಳಲು ಮಧುಸೂದನ್ ಅವರನ್ನು ನೇಮಕ ಮಾಡಲಾಗಿತ್ತು. ಆದರೆ ಈಗ ದೇಗುಲವೇ ನಮ್ಮದು ಎಂಬುದಾಗಿ ಗ್ರಾಮಸ್ಥರನ್ನು ದೂರವಿರಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಗ್ರಾಮಸ್ಥರ ಗಮನಕ್ಕೆ ತರದಂತೆ ತಮಗೆ ಬೇಕಾದವರು ಸೇರಿಸಿಕೊಂಡು ಸಮಿತಿ ರಚನೆ ಮಾಡಿಕೊಳ್ಳಲಾಗಿದೆ. ಈ ಬಗ್ಗೆ ತಕರಾರು ಮತ್ತು ಆಕ್ಷೇಪಣೆ ದೂರನ್ನು ಹಾಸನ ಉಪ ನಿಬಂಧಕರ ಕಚೇರಿಗೆ ಗ್ರಾಮಸ್ಥರ ಸಮ್ಮುಖದಲ್ಲಿ ದೂರು ನೀಡಲಾಗಿದೆ. ಸಮಿತಿಯ ಮೂಲಕ 1.14 ಎಕರೆ ಜಮೀನನ್ನು ತಮ್ಮ ಹೆಸರಿನಲ್ಲಿ ಲಪಟಾಯಿಸಲು ಒಳ ಸಂಚು ಮಾಡುತ್ತಿದ್ದಾರೆ ಎಂದು ಚಂದ್ರಹಾಸನ ದೂರಿದರು.

ಸಿಐಟಿಯು ಮುಖಂಡ ಎಚ್.ಎಸ್.ಮಂಜುನಾಥ್ ಮಾತನಾಡಿ, ತಾಲ್ಲೂಕು ದಂಡಾಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆಯೊಂದಿಗೆ ಗ್ರಾಮಸ್ಥರ ಮನವಿ ಗಮನಿಸಿ ದೇಗುಲವನ್ನು ಮುಜರಾಯಿ ಇಲಾಖೆಗೆ ಸೇರಿಸುವುದರ ಜೊತೆಗೆ ಸಂಬಂಧಪಟ್ಟ ಜಮೀನನ್ನು ದೇಗುಲದ ನಿರ್ವಹಣೆ ಸಲುವಾಗಿ ಕಾಯ್ದಿರಿಸಬೇಕು. ಇದು ಗ್ರಾಮಸ್ಥರ ಮನವಿಯಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ತಾಲೂಕು ಅಧ್ಯಕ್ಷ ತೇಜಸ್‌ಗೌಡ, ಕಾರ್ಯದರ್ಶಿ ವಾಸು, ಗ್ರಾಮ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋಪಾಲ್, ಮಾಜಿ ಸದಸ್ಯ ದೇವರಾಜು, ರಂಗನಾಥ್, ರೇವಣ್ಣ, ಜಯರಾಮ್, ನಂಜುಂಡೇಗೌಡ, ಅಪ್ಪಾಜಿ, ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಹಲವು ಜಿಲ್ಲೆಗಳಲ್ಲಿ ಗುಡುಗು ಸಹಿತ ಮಳೆಯ ಎಚ್ಚರಿಕೆ

ಬೆಂಗಳೂರು: ಭಾರತೀಯ ಹವಾಮಾನ ಇಲಾಖೆಯು ರಾಜ್ಯದ ಹಲವು ಜಿಲ್ಲೆಗಳಿಗೆ ಭಾರೀ ಮಳೆ ಎಚ್ಚರಿಕೆ ನೀಡಿದ್ದು, ಅದರಲ್ಲೂ, ರಾಜ್ಯದ ಕೆಲವು ಭಾಗಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಗುಡುಗು, ಸಿಡಿಲು ಮತ್ತು ಪ್ರಬಲ ಗಾಳಿಯೊಂದಿಗೆ ಮಳೆ ಬರಲಿದೆ ಎಂದು ಮುನ್ಸೂಚನೆ ನೀಡಿದೆ.

ನೀಡಿರುವ ಮಾಹಿತಿಯ ಪ್ರಕಾರ ನಾಳೆ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆಯಾಗಲಿದೆ. ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಕೊಡಗು ಜಿಲ್ಲೆಗಳಲ್ಲಿಯೂ ಭಾರಿ ಮಳೆಯಾಗುವ ಸಾಧ್ಯತೆ ಇದೆ.

ಇದರ ಜೊತೆಗೆ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿಯೂ ಗುಡುಗು ಸಹಿತ ಮಳೆಯಾಗಲಿದೆ ಎನ್ನಲಾಗಿದೆ.

ಸಫಾಯಿ ಕರ್ಮಚಾರಿಗಳಿಗೆ ವಿಶ್ರಾಂತಿ ಗೃಹ

ಕಾಳಜಿ ವಹಿಸಲು ಜಿ.ಪಂ. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭಂ ಶುಕ್ಲಾ ಸೂಚನೆ

• ಪ್ರಜೋದಯ ವರದಿ

ಹಾಸನ: ಸಫಾಯಿ ಕರ್ಮಚಾರಿಗಳಿಗೆ ವಿಶ್ರಾಂತಿ ಗೃಹ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಕಾಳಜಿ ವಹಿಸುವಂತೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶುಭಂ ಶುಕ್ಲಾ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣ ದಲ್ಲಿ ಶುಕ್ರವಾರ ನಡೆದ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ನಿಯೋಜನೆ ನಿಷೇಧ ಮತ್ತು ಪುನರ್ವಸತಿ ಅಧಿನಿಯಮ 2013 ರನ್ವಯ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪೌರ ಕಾರ್ಮಿಕರಿಗೆ ಗೃಹ ಭಾಗ್ಯ ಯೋಜನೆಯಡಿ ಮನೆ ಸೌಲಭ್ಯ ಒದಗಿಸಲು ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ ರಲ್ಲದೆ, ಸಫಾಯಿ ಕರ್ಮಚಾರಿಗಳಿಗೆ ಸುರಕ್ಷತಾ ಪರಿಕರಗಳನ್ನು ಒದಗಿಸ ವಂತೆ ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಅವರು ಮಾತನಾಡಿ, ನಗರದ ಸ್ವಚ್ಚತೆ ಕಾಪಾಡುವ ಪೌರಕಾರ್ಮಿಕರಿಗೆ ನಿಜವಾದ ಗೌರವ ನೀಡಬೇಕು. ಈ ನಿಟ್ಟಿನಲ್ಲಿ ಸರ್ಕಾರದಿಂದ ದೊರಕುವ ಸೌಲಭ್ಯಗಳನ್ನು ಒದಗಿಸಲು ಆಸಕ್ತಿ

ವಹಿಸಿ ಕರ್ತವ್ಯ ನಿರ್ವಹಿಸಿ ಎಂದರಲ್ಲದೆ, ಪೌರಕಾರ್ಮಿಕರಿಗೆ ಪಿ.ಎಫ್. ಹಣ ಸರಿಯಾಗಿ ತಲುಪುತ್ತಿದೆಯೇ ಎಂದು ಪರಿಶೀಲಿಸಿ ಎಂದರಲ್ಲದೆ, ಚನ್ನರಾಯಪಟ್ಟಣದ ಸಮುದಾಯ ಭವನಕ್ಕೆ ಮೂಲಭೂತ ಸೌಕರ್ಯ ಒದಗಿಸುವ ಕಾಮ ಗಾರಿಯ ಗುಣಮಟ್ಟಕ್ಕೆ ಆದ್ಯತೆ ನೀಡಿ ಎಂದು ತಿಳಿಸಿದರು.

ಕೊಣನೂರು ಗ್ರಾಮದ ಸರ್ವೆ ನಂಬರ್ 163 ರಲ್ಲಿ ಪೌರ ಕಾರ್ಮಿಕರು ವಾಸ ಮಾಡುತ್ತಿದ್ದಾರೆ. ಇವರಿಗೆ ಹಕ್ಕು ಪತ್ರ ನೀಡುವಂತೆ ಮನವಿ ಮಾಡಿದ್ದಾರೆ. ಇದು ಗುಂಡು ತೋಪು ಎಂದು ಆರ್.ಟಿ.ಸಿ. ಯಲ್ಲಿ ನಮೂದಾಗಿರುವುದರಿಂದ ಇವರಿಗೆ ಪರ್ಯಾಯ ಜಾಗ ಗುರುತಿಸಿ ಎಂದು ಸೂಚಿಸಿದರು.

ಹಿರಿಸಾವೆ ಗ್ರಾಮದಲ್ಲಿ ಸರ್ವೆ ನಂಬರ್ 519/520ರಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗೆ ಸೇರಿದ ಜಮೀನಿದ್ದು, ಓಡಾಡಲು ಅಕ್ಕಪಕ್ಕದ ಜಮೀನಿನವರು ದಾರಿ ಬಿಡುತ್ತಿಲ್ಲ ಎಂಬುದನ್ನು ಕುರಿತು ಪರಿಶೀಲ

ಶೇ.97.16 ರಷ್ಟು ಎನ್ಯುಮರೇಷನ್ ನಮೂನೆ ವಿತರಣೆ

• ಪ್ರಜೋದಯ ವರದಿ

ಹಾಸನ: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಜಿಲ್ಲೆಯಲ್ಲಿ ನಡೆಸುತ್ತಿದ್ದು, ಈಗಾಗಲೇ ಎನ್ಯುಮರೇಷನ್ ನಮೂನೆಗಳನ್ನು ಶೇ.97.16 ರಷ್ಟು ವಿತರಣೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಲತಾ ಕುಮಾರಿ ಅವರು ತಿಳಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿರುವ ಬಗ್ಗೆ ಸಭೆ ನಡೆಸಿ ಮಾತನಾಡಿದ ಅವರು, ಮತಗಟ್ಟೆ ಅಧಿಕಾರಿಗಳು ತುಂಬಾ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಮತಗಟ್ಟೆ ಏಜೆಂಟ್ ಕೂಡ ಸಹಕಾರ ನೀಡಿ ಅರ್ಹ ಮತದಾರರ ಹೆಸರು ಪಟ್ಟಿಯಿಂದ ಕೈಬಿಟ್ಟು ಹೊಗದಂತೆ ಸಹಕರಿಸಬೇಕೆಂದು ತಿಳಿಸಿದರು.

ಜಿಲ್ಲೆಯಲ್ಲೇ ಈಗಾಗಲೇ ವಿತರಣೆ ಮಾಡಿ ಹಿಂಪಡೆದ ಗಣತಿ ನಮೂನೆಗಳ ಗಣಕೀಕರಣದಲ್ಲಿ ಶೇ.28.32. ರಷ್ಟು ಪ್ರಗತಿ ಸಾಧಿಸಿದ್ದು, ಒಟ್ಟು 4,36,906 ಮತದಾರರ ವಿವರಗಳನ್ನು ತಂತ್ರಾಂಶದಲ್ಲಿ ನಮೂದಿಸಲಾಗಿದೆ ಎಂದು ತಿಳಿಸಿದರು.

ಮತಗಟ್ಟೆ ಅಧಿಕಾರಿಗಳು ಹಾಗೂ ಮತಗಟ್ಟೆ ಏಜೆಂಟ್‌ಗಳ ಸಭೆ ನಡೆಸಲು ಸೂಚನೆ ನೀಡಿ ದರು, ಜಿಲ್ಲೆಯಲ್ಲಿ ಇದುವರೆಗೆ 5013 ಸಂಗ್ರಹಿಸಲಾಗದ ಗಣತಿ ನಮೂನೆಗಳು ಎಂದು ಗುರುತಿಸಲಾಗಿದ್ದು, ಈ ಪೈಕಿ 3,240 ಮರಣ ಹೊಂದಿರುವ, 1,303 ಶಾಶ್ವತ ವಲಸೆ, 413 ಪುನರಾವರ್ತನೆ, 38ಗೈರು ಮತದಾರರು ಮತ್ತು 19 ಇತರೆ ಕಾರಣಗಳೆಂದು ನಮೂದಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ ವಿಧಾನಸಭಾ ಕ್ಷೇತ್ರಗಳ ಆಯಾ ಮತಗಟ್ಟೆಗಳ ವ್ಯಾಪ್ತಿಗೆ ಮತಗಟ್ಟೆ ಏಜೆಂಟನ್ನು ನೇಮಿಸುವಂತೆ ಕೋರಿದ್ದು, ಅದರಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಿಂದ 1965, ಭಾರತೀಯ ಜನತಾ ಪಾರ್ಟಿ 1600, ಜನತಾದಳ (ಎಸ್) ಪಕ್ಷದಿಂದ 1671 ಹಾಗೂ ಬಹುಜನ ಸಮಾಜ ಪಾರ್ಟಿ ಪಕ್ಷದಿಂದ 147 ಮತಗಟ್ಟೆ ಏಜೆಂಟರನ್ನು ರಾಜಕೀಯ ಪಕ್ಷಗಳಿಂದ ಪ್ರಸ್ತುತ ಜಿಲ್ಲೆಯಲ್ಲಿ ಒಟ್ಟು 5,383 ನೇಮಕ ಮಾಡಲಾಗಿರುತ್ತದೆ.

ಮತಗಟ್ಟೆ ಅಧಿಕಾರಿಗಳು ಮತಗಟ್ಟೆಯ ವ್ಯಾಪ್ತಿಯಲ್ಲಿ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯ ಮಾಹಿತಿಯನ್ನು ನೀಡುವ ಸಲುವಾಗಿ ತಮ್ಮ-ತಮ್ಮ ರಾಜಕೀಯ ಪಕ್ಷಗಳಿಂದ ಆಯಾ ಮತಗಟ್ಟೆ ವ್ಯಾಪ್ತಿಗೆ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರುಗಳನ್ನು ಒಳಗೊಂಡಂತೆ ಸಭೆ ನಡೆಸಿ ccrgje d gsrc ( ) ಸಿದ್ಧಪಡಿಸಿ, ತಂತ್ರಾಂಶದಲ್ಲಿ n ಮಾಡಲಾ ಗುತ್ತದೆ. ಈ ಮಾಹಿತಿಯನ್ನು ಈಗಾಗಲ್ಲೇ ನೇಮಕ ಮಾಡಲಾದ ಎಲ್ಲಾ ಮತಗಟ್ಟೆ ಏಜೆಂಟರ ಗಮನಕ್ಕೆ ತರುವಂತೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಯಾವುದೇ ನ್ಯೂನ್ಯತೆಗಳಿಗೆ ಅವಕಾಶವಿಲ್ಲದಂತೆ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಸಲಾಗುತ್ತದೆ. ಎಲ್ಲರ ಸಹಕಾರ ಅಗತ್ಯ ಎಂದರು.

ಕಾಂಗ್ರೆಸ್ ಪಕ್ಷದ ಪ್ರತಿನಿಧಿ ರಘು, ಜೆ.ಡಿ.ಎಸ್. ಪಕ್ಷದ ಪ್ರತಿನಿಧಿ ಎಸ್. ದ್ಯಾವೇಗೌಡ, ಬಿ.ಜೆ.ಪಿ. ಪಕ್ಷದ ಅಮಿತ್ ಶೆಟ್ಟಿ, ಅಮ್ಮ ಆದ್ಮಿ ಪಕ್ಷದ ಆಗಿಲೆ ಯೋಗೇಶ್, ಕಮ್ಯೂನಿಸ್ಟ್ ಪಕ್ಷದ ಪ್ರತಿನಿಧಿ ನವೀನ್‌ಕುಮಾರ್, ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಹಾಗೂ ಮತ್ತಿತರ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

ದೊಡ್ಡಕುಂಚೇವು ಆರೋಗ್ಯ ಕೇಂದ್ರ ಉದ್ಘಾಟನೆ ಜಟಾಪಟಿ

» ಮೊದಲನೇ ಪುಟದಿಂದ

ತಮಗೆ ಯಾವುದೇ ಮಾಹಿತಿ ನೀಡದೆ, ಏಕಾಏಕಿ ಉದ್ಘಾಟನೆ ಮಾಡಲಾಗಿದೆ. ಇದರಲ್ಲಿ ಕಾನೂನು ಹಾಗು ಶಿಷ್ಟಾಚಾರ ಉಲ್ಲಂಘನೆಯಾಗಿದೆ ಎಂದು ಆರೋಪಿಸಿದರು.

ಹೊಳೆನರಸೀಪುರ ಶಾಸಕರು ಇನ್ನೂ ಹಳೆಯ ರಾಜಕೀಯ ಸಂಸ್ಕೃತಿಯಲ್ಲೇ ಇದ್ದಾರೆ. ಇದು ಪ್ರಜಾ ಪ್ರಭುತ್ವ ವ್ಯವಸ್ಥೆ. ಉದ್ಘಾಟನಾ ಕಾರ್ಯ ಕ್ರಮದಲ್ಲಿ ಎಲ್ಲಾ ಜನಪ್ರತಿನಿಧಿಗಳಿಗೂ ಗೌರವ ನೀಡಬೇಕು. ಅದು ಹಿಂದಿನಿಂದಲೂ ನಡೆದು ಕೊಂಡು ಬಂದಿರುವ ಶಿಷ್ಟಾಚಾರ. ಅವರು ಹಿರಿಯ ಶಾಸಕರಾಗಿ ಮಾರ್ಗದರ್ಶನ ಮಾಡುವ ಬದಲು ನಿಯಮಗಳನ್ನು ಗಾಳಿಗೆ ತೂರಿದ್ದಾರೆ. ಸ್ಥಳೀಯ ಅಧಿಕಾರಿಗಳನ್ನು ಒತ್ತಡಕ್ಕೆ ಸಿಲುಕಿಸಿ ಕಾರ್ಯಕ್ರಮ ನಡೆಸಲಾಗಿದೆ ಎಂಬ ಅನುಮಾನವಿದ್ದು, ಈ ಕುರಿತು ಜಿಲ್ಲಾಧಿಕಾರಿಯಿಂದ ತನಿಖೆ ನಡೆಸುವಂತೆ ಮನವಿ ಮಾಡಲಾಗುವುದು. ಶಿಷ್ಟಾಚಾರ ಉಲ್ಲಂಘನೆ ಕುರಿತು ಸಂಸತ್ತಿನ ಮಟ್ಟದಲ್ಲಿಯೂ ದೂರು ಸಲ್ಲಿಸುವುದಾಗಿ ಎಚ್ಚರಿಸಿದರು.

ಬ್ಲ್ಯಾಕ್ ಕಾಂಗ್ರೆಸ್ ಅಧ್ಯಕ್ಷ ಹೆಚ್.ಟಿ.ಲಕ್ಷ್ಮಣ್, ಮುಖಂಡರಾದ ಕಮಲಮ್ಮ, ಬೀಚೇನಹಳ್ಳಿ ಬಸವರಾಜ್, ಗ್ಯಾರಂಟಿ ಸಮಿತಿ ಕಾರ್ಯ ದರ್ಶಿ ಪ್ರಸನ್ನ ಕುಮಾರ್, ದೊಡ್ಡಕುಂಚೇವು ಗ್ರಾಮದ ಕಾಂಗ್ರೆಸ್ ಮುಖಂಡ ವೈ.ಡಿ.ಹುಚ್ಚೇಗೌಡ, ಲೋಕೇಶ್ ಹಾಜರಿದ್ದರು.

ಜು.14 ರಿಂದ ಯಲಹಂಕ-ಅರಸೀಕೆರೆ ಮೆಮು ರೈಲು

ಹಾಸನ: ರೈಲ್ವೆ ಸಂಪರ್ಕವನ್ನು ಸುಧಾರಿಸಲು ಮತ್ತು ಪ್ರಯಾಣಿಕರಿಗೆ ಉತ್ತಮ ಪ್ರಯಾಣದ ಸೌಲಭ್ಯಗಳನ್ನು ಒದಗಿಸಲು ರೈಲ್ವೆ ಮಂಡಳಿಯು ಯಲಹಂಕ-ಅರಸೀಕೆರೆ ನಡುವೆ ಮೆಮು ಸೇವೆಗಳ ಪ್ರಾರಂಭಕ್ಕೆ ಅನುಮೋದನೆ ನೀಡಿದೆ. ಈ ರೈಲುಗಳ ಸಂಚಾರ ಜು.14 ರಿಂದ ಆರಂಭ ವಾಗಲಿದೆ. 66505 ಸಂಖ್ಯೆಯ ರೈಲು ಯಲಹಂಕ-ಅರಸೀಕೆರೆ ಮೆಮು ಜುಲೈ 14 ರಿಂದ ಜಾರಿಗೆ ಬರುವಂತೆ ವಾರದಲ್ಲಿ ಆರು ದಿನಗಳು (ಭಾನುವಾರ ಹೊರತುಪಡಿಸಿ) ಕಾರ್ಯನಿರ್ವಹಿಸಲಿದೆ.ಈರೈಲು ಯಲಹಂಕದಿಂದ ಬೆಳಿಗ್ಗೆ 6:45 ಗಂಟೆಗೆ ಹೊರಟು ಅದೇ ದಿನ 11 ಗಂಟೆಗೆ ಅರಸೀಕೆರೆಜಂಕ್ಷನ್ ತಲುಪಲಿದೆ.

ಬಿಳಿಸುಳಿ ರೋಗ ಬಾಧೆ: ಕೃಷಿ ಅಧಿಕಾರಿಗಳಿಂದ ಪರಿಶೀಲನೆ

• ಪ್ರಜೋದಯ ವರದಿ

ಬೇಲೂರು: ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಬೆಳೆದಿರುವ ಮುಸುಕಿನ ಜೋಳದ ಬೆಳೆಗೆ ಬಿಳಿಸುಳಿ ಕೀಟದ ಹಾವಳಿ ಕಾಣಿಸಿಕೊಂಡ ಹಿನ್ನಲೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳುಶುಕ್ರವಾರ ಜಮೀನುಗಳಲ್ಲಿ ಪರೀಶಿಲನೆ ನಡೆಸಿದರು.

ಕೀಟದ ಹಾವಳಿ ಪ್ರಮಾಣ, ಹಾನಿ ಹಾಗು ನಿಯಂತ್ರಣ ಕ್ರಮಗಳ ಕುರಿತು ರೈತರಿಗೆ ಮಾಹಿತಿ ನೀಡಿದರು. ಬಿಳಿಸುಳಿ ಕೀಟದ ಬಾಧೆ ಯಿಂದ ಜೋಳದ ಗಿಡಗಳು ಬೆಳವಣಿಗೆ ಕುಂಠಿತವಾಗುವುದು, ಎಲೆಗಳು ಹಳದಿ ಬಣ್ಣಕ್ಕೆ ತಿರುಗಿ ಬೇರುಗಳಿಗೆ ಹಾನಿಯಾಗುವ ಸಾಧ್ಯತೆ ಇರುವುದರಿಂದ ರೈತರು ನಿರಂತರವಾಗಿ ತಮ್ಮ ಹೊಲಗಳನ್ನು ಪರಿಶೀಲಿಸುವಂತೆ ಸಲಹೆ ನೀಡಿದರು.

ಸಕಲೇಶಪುರ ಉಪ ಕೃಷಿ ನಿರ್ದೇಶಕ ಡಾ. ಪ್ರಭಾಕರ್ ಅವರು ಮಾತನಾಡಿ, ಬೆಳೆಯಲ್ಲಿನ ಕೀಟದ ಹಾವಳಿ ಪ್ರಾರಂಭಿಕ ಹಂತದಲ್ಲೇ ಪತ್ತೆಯಾದರೆ ಪರಿಣಾಮಕಾರಿ ನಿಯಂತ್ರಣ ಸಾಧ್ಯ. ಆದ್ದರಿಂದ ಹೊಲಗಳಲ್ಲಿ ನಿಯಮಿತವಾಗಿ ನಿಗಾ ವಹಿಸಿ, ಸೋಂಕಿತ ಗಿಡಗಳನ್ನು ಗುರುತಿಸಿ ಕ್ರಮ ಕೈಗೊಳ್ಳಬೇಕು. ರೈತರು ಕೃಷಿ ಇಲಾಖೆ ಶಿಫಾರಸ್ಸಿನಂತೆ ಮಾತ್ರ ಕೀಟನಾಶಕ ಬಳಸಬೇಕು. ಸ್ವಯಂ ನಿರ್ಧಾರದಿಂದ ಔಷಧಿ ಸಿಂಪಡಿಸುವ ಬದಲು ಕೃಷಿ ಅಧಿಕಾರಿಗಳ ಸಲಹೆ ಪಡೆದು ವೈಜ್ಞಾನಿಕ ಕ್ರಮ ಅನುಸರಿಸಬೇಕು. ಜಮೀನಿನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳುವುದು, ಕಳೆ ನಿಯಂತ್ರಣ, ಸಮತೋಲಿತ ಪೋಷಕಾಂಶ ನಿರ್ವಹಣೆಯೂ ಬೆಳೆ ರಕ್ಷಣೆಗೆ ಸಹಕಾರಿಯಾಗಲಿದೆ. ಬೆಳೆ ಹಾನಿಯಾಗಿರುವ ಬಗ್ಗೆ ಮಾಹಿತಿ ಪಡೆದ ತಕ್ಷಣ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರ ಸಮಸ್ಯೆಗಳ ಬಗ್ಗೆ ಅಗತ್ಯ ತಾಂತ್ರಿಕ ಮಾರ್ಗದರ್ಶನ ನೀಡುವುದಲ್ಲದೆ ಮುಂದಿನ ದಿನಗಳಲ್ಲಿ ಬೆಳೆಗಳ ಮೇಲೆ ನಿಗಾ ವಹಿಸಿ ರೈತರಿಗೆ ಅಗತ್ಯ ನೆರವು ನೀಡಲಿದ್ದಾರೆಂದರು.

ಬೇಲೂರು ಸಹಾಯಕ ಕೃಷಿ ನಿರ್ದೇಶಕ ಕಾಂತರಾಜ್ ಅವರು ಮಾತನಾಡಿ, ಸಾಮಾನ್ಯವಾಗಿ ಈ ರೋಗವು Ocpl acp n p ಎಂಬ ಶಿಲಿಂಧ್ರದಿಂದ ಬರುತ್ತದೆ. ರೋಗ ತಗುಲಿದ ಬೆಳೆಯಲ್ಲಿ ಬೂದು ಬಣ್ಣದ ಶಿಲೀಂಧ್ರವು ಎಲೆಗಳ ತಳ ಮತ್ತು ಮೇಲ್ಭಾಗದಲ್ಲಿ ಕಂಡುಬರುತ್ತದೆ. ಎಲೆಗಳ ಮೇಲೆ ಬಿಳಿ ಮತ್ತು ಹಳದಿ ಉದ್ದನೆ ಪಟ್ಟಿಗಳು ಕಾಣಿಸಿಕೊಂಡು ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಬಿಳಿಯಾಗಿ ಗಿಡಗಳ ಬೆಳವಣಿಗೆ ಕುಂಠಿತವಾಗಿ ಎಲೆಗಳು ಒಣಗಿ ಉದು ರುತ್ತವೆ. ವಾತಾವರಣದಲ್ಲಿ ಹೆಚ್ಚು ತೇವಾಂಶ, ತುಂತುರು ಮಳೆ, ಮೋಡ ಕವಿದ ವಾತಾವರಣ, ಮಂಜು ಹನಿಯಿಂದ ಎಲೆಗಳು ದೀರ್ಘ ಸಮಯ ಒದ್ದೆಯಾಗಿರುವುದು, ಮಿತವಾದ ತಾಪಮಾನ ಮತ್ತು ಹೆಚ್ಚು ಆರ್ದ್ರತೆ, ಹಿಂದಿನ ಬೆಳೆಗಳಲ್ಲಿ ಉಳಿದುಕೊಂಡಿದ್ದ ಶಿಲೀಂಧ್ರವು ಹರಡುವ ಸಾಧ್ಯತೆ ಇರುತ್ತದೆ. ರೋಗ ತಗುಲಿದ ಗಿಡಗಳನ್ನು ಕಿತ್ತು ನಾಶಪಡಿಸಿ ಸಮತೋಲನ ಗೊಬ್ಬರ ಬಳಸಬೇಕು. ಅತಿಯಾದ ಸಾರಜನಕದ ಗೊಬ್ಬರ ನೀಡಬಾರದು. ರೋಗದ ಹತೋಟಿಗೆ 2.0 ಗ್ರಾಂ ಮೆಟಲಾಕ್ಸಿಲ್ ಹಾಗು ಮ್ಯಾಂಕೋಜೆಬ್ ಅಥವಾ 2.0 ಮಿ.ಲೀ. ಮೆಟ ಲಾಕ್ಸಿಲ್ ಮತ್ತು ಕ್ಲೋರೋಥಲನಿಲ್‌ನ್ನು ಪ್ರತಿ ಲೀ. ನೀರಿಗೆ ಬೆರಸಿ ಸಿಂಪಡಿಸಬೇಕು ಎಂದರು.

ಹಳೇಬೀಡು ಕೃಷಿಅಧಿಕಾರಿಹೇಮಂತ, ತಾಲ್ಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಬ್ಬಾಳು ಹಾಲಪ್ಪ, ಕೃಷಿ ಇಲಾಖೆಯ ಲತಾ ಮತ್ತಿತರರಿದ್ದರು.

ಅಮೃತ ಮಹೋತ್ಸವ ಮಂಟಪದ ಜಗುಲಿ ತೆರವು

• ಪ್ರಜೋದಯ ವರದಿ

ಹಾಸನ: ನಗರದ ಡೇರಿ ವೃತ್ತದಲ್ಲಿ 75ನೇ ಸ್ವಾತಂತ್ರ್ಯದ ಅಮೃತ ಮಹೋತ್ಸವ ನೆನಪಿಗಾಗಿ ನಿರ್ಮಾಣ ಮಾಡಿದ್ದ ಮಂಟಪ ಸುತ್ತ ಕೆ.ಶಿಪ್ ನವರು ನಿರ್ಮಿಸಿದ್ದ ಜಗುಲಿಯಾಕಾರದ ಕಟ್ಟಡವನ್ನು ತೆರವುಗೊಳಿಸಲಾಗಿದೆ.

ಈ ಮೊದಲು ಮಂಟಪದ ಸುತ್ತಲೂ ಹೆಚ್ಚುವರಿಯಾಗಿ ಜಗುಲಿ ಆಕಾರದಲ್ಲಿ ಸಿಮೆಂಟ್‌ನಿಂದ ಸುಮಾರು 2 ಅಡಿ ಎತ್ತರದಲ್ಲಿ ನಿರ್ಮಾಣ ಮಾಡಲಾಗಿತ್ತು. ಅದರಿಂದ ಹೆಚ್ಚುವರಿಯಾಗಿ ಮಾಡಿದ್ದ ನಿರ್ಮಾಣವು, ಸುತ್ತಲೂ ರಸ್ತೆಯನ್ನು ಆಕ್ರಮಿಸಿಕೊಂಡಿತ್ತು. ಮಾತ್ರವಲ್ಲ ರೈಲ್ವೆ ನಿಲ್ದಾಣ, ರಿಂಗ್ ರಸ್ತೆ, ಅರಸೀಕೆರೆ ರಸ್ತೆ ಮತ್ತು ಬೆಂಗಳೂರು ಕಡೆಯಿಂದ ಬರುವ ಹೋಗುವ ವಾಹನ ಸವಾರರು ಹಾಗು ಚಾಲಕರಿಗೆ ತೀವ್ರ ತೊಂದರೆಯಾಗಿತ್ತು. ಯಾಮಾರಿದರೂ ಅಪಘಾತ ಸಂಭವಿಸುವ ಅಪಾಯ ಇತ್ತು.

ಈ ಬಗ್ಗೆ ಅನೇಕರು ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್ ಅವರಿಗೆ ದೂರು ನೀಡಿದ್ದರು. ಈ ಹಿನ್ನಲೆ ಕೆ.ಶಿಪ್ ಸೂಪರಿಂಟೆಂಡೆಂಟ್ ಇಂಜಿನೀಯರ್ ಸುಪ್ರಿಯಾ, ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಹೇಮಂತ್ ಹಾಗು ಸಂಚಾರಿ ಠಾಣೆ ಇನ್ಸ್‌ಪೆಕ್ಟರ್ ದಯಾನಂದ್ ಮೊದಲಾದವರೊಂದಿಗೆ ಸಭೆ ನಡೆಸಿದ ಶಾಸಕರು, ಸಾರ್ವಜನಿಕರು ಹಾಗು ವಾಹನ ಚಾಲಕರಿಗೆ ಒಂದು ರೀತಿಯಲ್ಲಿ ಅಡ್ಡಿಯಾಗಿರುವ ಹೆಚ್ಚುವರಿ ನಿರ್ಮಾಣವನ್ನು ಕೂಡಲೇ ತೆರವು ಮಾಡು ವಂತೆ ಸೂಚಿಸಿದ್ದರು.

ಶಾಸಕರ ಸೂಚನೆ ಹಿನ್ನಲೆ ಎಚ್ಚೆತ್ತ ಅಧಿಕಾರಿಗಳು, ಕೂಡಲೇ ಹೆಚ್ಚುವರಿ ನಿರ್ಮಾಣವನ್ನು ಶುಕ್ರವಾರ ತೆರವುಗೊಳಿಸಿದರು. ಅದರಿಂದ ವಾಹನ ಸಂಚಾರಕ್ಕೆ ಮುಕ್ತ ಅವಕಾಶ ಸಿಕ್ಕಂತಾಗಿದೆ. ಇದಕ್ಕೂ ಮುನ್ನ ರಿಂಗ್ ರಸ್ತೆ ಹಾಗು ಡೇರಿ ವೃತ್ತದ ಕಡೆಯಲ್ಲಿದ್ದ ಕಬ್ಬಿಣದ ಗ್ರಿಲ್ ಬೇಲಿಯನ್ನು ತೆರವುಗೊಳಿಸಿ ಡಾಂಬರ್ ಹಾಕುವ ಮೂಲಕ ಸಂಚಾರಕ್ಕೆ ಇದ್ದ ತೊಂದರೆಯನ್ನು ನಿವಾರಣೆ ಮಾಡಲಾಗಿದೆ.

ನಿವಾಸಿಗಳಿಂದ ಆಕ್ರೋಶ: ಹೋರಾಟ ರೂಪಿಸಲು ಸಭೆ ನಡೆಸಿ ಚರ್ಚೆ

ಎಸ್ ಎಂಕೆ ಬಡಾವಣೆಯಲ್ಲಿ ವಿದ್ಯುತ್, ನೀರಿಗೆ ಸಮಸ್ಯೆ

• ಪ್ರಜೋದಯ ವರದಿ

ಹಾಸನ: ನಗರದ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಕಳೆದ 8 ದಿನಗಳಿಂದ ವಿದ್ಯುತ್ ಹಾಗು ಕುಡಿಯುವ ನೀರಿನ ಸರಬರಾಜು ಸ್ಥಗಿತಗೊಂಡಿರುವ ಹಿನ್ನಲೆ ನಿವಾಸಿಗಳು ತೀವ್ರ ಆಕ್ರೋಶ ವ್ಯಕ್ತಪಡಿಸಿ ಶುಕ್ರವಾರ ಬಿಜಿಎಸ್ ವೃತ್ತದಲ್ಲಿ ಸಭೆ ನಡೆಸಿದ ನಿವಾಸಿಗಳು ಹೋರಾಟದ ರೂಪುರೇಷೆಗಳ ಕುರಿತು ಚರ್ಚೆ ನಡೆಸಿದರು.

ಬಡಾವಣೆಯ ಅಧ್ಯಕ್ಷ ಧರ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ನಿರ್ದೇಶಕ ವೈ.ಬಿ.ರವಿ ಅವರು ಮಾತನಾಡಿ, ಏಷ್ಯಾದ ಅತಿದೊಡ್ಡ ಬಡಾವಣೆ ಎಂಬ ಹೆಗ್ಗಳಿಕೆ ಹೊಂದಿರುವ ಎಸ್‌ಎಂಕೆ ನಗರದಲ್ಲಿ ಜನರು ಕನಿಷ್ಠ ಮೂಲಭೂತ ಸೌಲಭ್ಯಗಳಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಎಂಟು ದಿನಗಳಿಂದ ವಿದ್ಯುತ್ ಇಲ್ಲದೆ ಮನೆಗಳು ಕತ್ತಲಲ್ಲಿ ಮುಳುಗಿದ್ದು, ಕುಡಿಯುವ ನೀರಿನ ಪೂರೈಕೆಯೂ ಸಂಪೂರ್ಣ ಸ್ಥಗಿತಗೊಂಡಿದೆ. ಹಲವು ಬಾರಿ ಅಧಿಕಾರಿಗಳ ಗಮನಕ್ಕೆ ತಂದರೂ ಸ್ಪಂದನೆ ದೊರೆತಿಲ್ಲವೆಂದು ಆರೋಪಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ 200ಕ್ಕೂ ಹೆಚ್ಚು ಮಹಿಳೆಯರು, ಪುರುಷರು ತಮ್ಮ ಸಮಸ್ಯೆಗಳನ್ನು ಹಂಚಿಕೊಂಡರು. ವಿದ್ಯುತ್ ಇಲ್ಲದ ಕಾರಣ ನೀರಿನ ಪೂರೈಕೆ ಸ್ಥಗಿತಗೊಂಡಿದ್ದು, ದಿನನಿತ್ಯದ ಜೀವನ ದುಸ್ತರವಾಗಿದೆ. ರಾತ್ರಿ ವೇಳೆ ಸಂಪೂರ್ಣ ಕತ್ತಲು ಆವರಿಸುವುದರಿಂದ ಭದ್ರತೆಯ ಸಮಸ್ಯೆ ಎದುರಾಗುತ್ತಿದೆ. ಮಹಿಳೆಯರು, ಮಕ್ಕಳು ಹಾಗು ವೃದ್ಧರು ಭಯದ ವಾತಾವರಣದಲ್ಲಿ ಬದುಕುವಂತಾಗಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು.

ಬೀದಿ ದೀಪಗಳಿಲ್ಲ

ಬಡಾವಣೆಯ ಅನೇಕ ರಸ್ತೆಗಳಲ್ಲಿ ಬೀದಿ ದೀಪಗಳ ವ್ಯವಸ್ಥೆಯೇ ಇಲ್ಲ. ಎಲ್ಲೆಡೆ ಗಿಡಗಂಟಿಗಳು ಬೆಳೆದು ಹಾವು-ಚೇಳುಗಳ ಕಾಟ ಹೆಚ್ಚಾಗಿದ್ದು, ಕೆಲವು ಪ್ರದೇಶಗಳು ಕಾಡಿನಂತಾಗಿವೆ. ಸಾರ್ವಜನಿಕರು ಓಡಾಡಲು ಸಹ ಭಯಪಡುವ ಪರಿಸ್ಥಿತಿ ನಿರ್ಮಾಣವಾಗಿದೆ. ರಾತ್ರಿ ವೇಳೆ ಕಳ್ಳತನ ಸೇರಿ ಅಹಿತಕರ ಘಟನೆಗಳು ನಡೆಯುವ ಭೀತಿ ಕಾಡುತ್ತಿದೆ. ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಮಹಾನಗರ ಪಾಲಿಕೆ ಅಧಿಕಾರಿಗಳು ಬಡಾವಣೆಯ ಸಮಸ್ಯೆಗಳ ಬಗ್ಗೆ ಸಂಪೂರ್ಣ ನಿರ್ಲಕ್ಷ್ಯ ವಹಿಸಿದ್ದಾರೆಂದು ನಿವಾಸಿಗಳು ಅಸಮಾಧಾನ ವ್ಯಕ್ತಪಡಿಸಿದರು.

ಶಾಸಕರಿಂದ ಶೀಘ್ರ ಪರಿಹಾರದ ಭರವಸೆ

ಸಭೆ ನಡೆಯುತ್ತಿದ್ದ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಶಾಸಕ ಹೆಚ್.ಪಿ.ಸ್ವರೂಪ್ ಅವರು, ಸಾರ್ವಜನಿಕರ ಅಹವಾಲುಗಳನ್ನು ಆಲಿಸಿ ಅಧಿಕಾರಿಗಳೊಂದಿಗೆ ಚರ್ಚಿಸಿ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಸೋಮವಾರ ಈ ಬಗ್ಗೆ ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಕುಡಿಯುವ ನೀರು, ವಿದ್ಯುತ್, ಬೀದಿ ದೀಪ ಹಾಗು ಇತರೆ ಮೂಲಸೌಕರ್ಯಗಳ ಕುರಿತು ಸಮಗ್ರ ಸಭೆ ನಡೆಸಲಾಗುವುದು. ವಿಶೇಷವಾಗಿ ವಿದ್ಯುತ್ ಸಮಸ್ಯೆಯನ್ನು 15 ದಿನಗಳೊಳಗೆ ಸಂಪೂರ್ಣವಾಗಿ ಬಗೆಹರಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
ಶಾಸಕರು ನೀಡಿದ ಭರವಸೆಯ ಹಿನ್ನಲೆ ನಿವಾಸಿಗಳು ತಾತ್ಕಾಲಿಕವಾಗಿ ಪ್ರತಿಭಟನೆಯನ್ನು ಮುಂದೂಡಲು ನಿರ್ಧರಿಸಿದರು. ಸೋಮವಾರ ನಡೆಯಲಿರುವ ಅಧಿಕಾರಿಗಳ ಸಭೆಯ ಫಲಿತಾಂಶವನ್ನು ಆಧರಿಸಿ ಮುಂದಿನ ಹೋರಾಟದ ಬಗ್ಗೆ ತೀರ್ಮಾನ ಕೈಗೊಳ್ಳುವುದಾಗಿ ತಿಳಿಸಿದರು.

ಜಿಲ್ಲಾ ಲಾರಿ ಮಾಲೀಕ